# ಪ್ರಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ




ಹೊನ್ನಾವರದ ಪರೇಶ್ ಮೇಸ್ತ ಹಾಗೂ ಹಿಂದೂ ಕಾರ್ಯಕರ್ತರ ಸರಣಿ ಹತ್ಯೆ ಖಂಡಿಸಿ ಹಿಂದೂ ಹಿತರಕ್ಷಣಾ ವೇದಿಕೆ ವತಿಯಿಂದ ಡಿ. 19ರಂದು ರಾಜ್ಯಾದ್ಯಂತ ಪ್ರತಿಭಟನೆ ನಡೆಯಿತು.


ಸಂಪುಟ : 39 ಸಂಚಿಕೆ : 10 ಹೇಮಲಂಬಿ–ಪುಷ್ಯ ಕಲಿಯುಗಾಬ್ದ 5119 1–1–2018 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4


# ಸಿದ್ದರಾಮಯ್ಯನವರ ಪ್ರಜಾಪ್ರಭುತ್ವ ವಿರೋಧಿ ಸರ್ಕಾರ

## ಇನ್ನೆಷ್ಟು ದಿನ ಸಹಿಸಬೇಕು? ಇನ್ನೆಷ್ಟು ಅಮಾಯಕರ ರಕ್ತ ಚೆಲ್ಲಬೇಕು?

2013 ಮೇ ತಿಂಗಳಿನಿಂದ ಕರ್ನಾಟಕದಲ್ಲಿ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಆಡಳಿತ ನಡೆಸುತ್ತಿದೆ. 'ಅಹಿಂದ' ಸಮುದಾಯದ ಉದ್ಧಾರದ ಹೆಸರಿನಲ್ಲಿ ಅಧಿಕಾರಕ್ಕೇರಿದ ಸಿದ್ದರಾಮಯ್ಯ ತಮ್ಮನ್ನು ಹಿಂದುಳಿದ ಜನಾಂಗಗಳ ಪ್ರತಿನಿಧಿ ಎಂದು ಬಿಂಬಿಸಿಕೊಂಡರೇ ಹೊರತು ವಾಸ್ತವವಾಗಿ ಹಿಂದುಳಿದವರಿಗೆ, ದಲಿತರಿಗೆ ನೀಡಿದ್ದಕ್ಕಿಂತ ಕಡೆಗಣಿಸಿದ್ದೇ ಹೆಚ್ಚು. ಅವಕಾಶಗಳಿದ್ದರೂ ಸರ್ಕಾರದ ಆಯಕಟ್ಟಿನ ಜಾಗಗಳಲ್ಲಿ ದಲಿತೇತರರಿಗೇ ಮೊದಲ ಪ್ರಾಶಸ್ತ್ಯ ನೀಡಿರುವುದು ವಾಸ್ತವ. ಸ್ವಾತಂತ್ರ್ಯದ ನಂತರದಿಂದ ಇಂದಿನವರೆಗೂ ಕಾಂಗ್ರೆಸ್ಸಿಗರಿಗೆ ದಲಿತರು, ಹಿಂದುಳಿದವರು ಎಂಬುದು ಕೇವಲ ಚುನಾವಣೆಯ ಅಸ್ತ್ರವೇ ಹೊರತು ಅವರ ಬಗೆಗಿನ ಪ್ರಾಮಾಣಿಕ ಕಾಳಜಿಯಲ್ಲ ಎನ್ನುವುದಕ್ಕೆ ಇತಿಹಾಸ ಸಾಕ್ಷಿಯಾಗಿ ನಿಂತಿದೆ. ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅನುಸರಿಸಿದ್ದೂ ಇದೇ ನೀತಿಯನ್ನು.

ಇದೀಗ ಚುನಾವಣೆ ಹತ್ತಿರ ಬರುತ್ತಿದ್ದಂತೆ ಕರ್ನಾಟಕದ ಲಿಂಗಾಯತ ಸಮುದಾಯಕ್ಕೆ ಪ್ರತ್ಯೇಕ ಮತವಾಗಿ ಮಾನ್ಯತೆ ನೀಡುವ ಹೊಸ ಕಸರತ್ತಿಗೆ ರಾಜ್ಯ ಸರ್ಕಾರ ಕೈಹಾಕಿದೆ. ಹಿಂದೂ ಒಗ್ಗಟ್ಟನ್ನು ಒಡೆಯುವ ಈ ಹೊಸ ಬೆಳವಣಿಗೆಯು ವೀರಶೈವ–ಲಿಂಗಾಯತ ಸಮುದಾಯಗಳನ್ನೂ ಸೇರಿದಂತೆ ಎಲ್ಲ ಜಾತಿ ಸಮುದಾಯಗಳಲ್ಲೂ ಗೊಂದಲ ಹಾಗೂ ಆತಂಕ ಸೃಷ್ಟಿಸಿದೆ. ಕಳೆದ ಒಂದೆರಡು ದಶಕಗಳಿಂದ ಕಾಂಗ್ರೆಸ್ ಪಕ್ಷ ವೀರಶೈವ–ಲಿಂಗಾಯತ ಸಮುದಾಯದ ಬೆಂಬಲ ಗಳಿಸಲು ವಿಫಲವಾಗಿತ್ತು. ಈ ಕೊರತೆಯನ್ನು ತುಂಬಲು ಸಿದ್ದರಾಮಯ್ಯನವರು ಒಡೆದು ಆಳುವ ತಂತ್ರವನ್ನು ಉಪಯೋಗಿಸಿದ್ದಾರೆ ಎಂಬ ಭಾವನೆ ಸಾರ್ವತ್ರಿಕವಾಗಿದೆ. ಇತ್ತೀಚೆಗೆ ಗುಜರಾತ್‌ನಲ್ಲಿಯೂ ಪಟೇಲ್ ಸಮುದಾಯವನ್ನು ಎತ್ತಿಕಟ್ಟಿ ಚುನಾವಣಾ ಲಾಭ ಗಳಿಸುವ ಕುತಂತ್ರ ನಡೆಸಿದ ಮಾದರಿಯಲ್ಲಿಯೇ ಕರ್ನಾಟಕದಲ್ಲಿ ಲಿಂಗಾಯತ ಪ್ರತ್ಯೇಕ ಮತ ಬೇಡಿಕೆಯ ಕಸರತ್ತು ನಡೆಯುತ್ತಿದೆ ಎನ್ನಲಾಗುತ್ತಿದೆ.



ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸರ್ಕಾರ ಜನರ ಭಾವನೆಗಳಿಗೆ ಬೆಲೆ ಕೊಡಬೇಕು. ಜನರಿಗೆ ತನ್ನ ನೀತಿಗಳನ್ನು ಮನವರಿಕೆ ಮಾಡುವ ಪ್ರಯತ್ನ ನಡೆಸಬೇಕು, ಅದು ವಿಫಲವಾದರೆ ನೀತಿಗಳನ್ನು ಬದಲಾಯಿಸಿಕೊಳ್ಳುವ ಮಾನಸಿಕತೆಯನ್ನು ಬೆಳೆಸಿಕೊಳ್ಳಬೇಕು. ಇದು ಪ್ರಜಾಪ್ರಭುತ್ವದ ಲಕ್ಷಣ. ಇದಕ್ಕೆ ವಿರುದ್ಧವಾದಲ್ಲಿ ಅದು ಸರ್ವಾಧಿಕಾರವೇ ಸರಿ. ಸಿದ್ದರಾಮಯ್ಯ ಸರ್ಕಾರದಲ್ಲಿ ಕಳೆದ ನಾಲ್ಕೂವರೆ ವರ್ಷಗಳಲ್ಲಿ ಅಡಿಗಡಿಗೂ ನಮಗೆ ಕಾಣಿಸುವುದು ತಾನು ಅಂದುಕೊಂಡಿದ್ದನ್ನು ನಡೆಸಿಯೇ ತೀರುತ್ತೇನೆ, ಅದಕ್ಕೆಷ್ಟು ವಿರೋಧ, ಅಡ್ಡಿ–ಆತಂಕಗಳು ಎದುರಾದರೂ ಸರಿಯೇ – ಎಂಬ ಭಂಡ ಮೊಂಡು ಹಠವನ್ನೆ.

ಟಿಪ್ಪು ಜಯಂತಿಯಂತಹ ಹತ್ತಾರು ದೃಷ್ಟಾಂತಗಳು ಇದಕ್ಕೆ ನಿದರ್ಶನಗಳಾಗಿ ನಿಲ್ಲುತ್ತವೆ. 2015ರಲ್ಲಿ ಟಿಪ್ಪು ಜಯಂತಿಯನ್ನು ಸರ್ಕಾರದ ವತಿಯಿಂದ ಅಧಿಕೃತವಾಗಿ ಆಚರಿಸಲು ನಿರ್ಧರಿಸಿತು, ಈ ಸರ್ಕಾರ. ಹಿಂದುಗಳು, ಕ್ರೈಸ್ತರು ಸೇರಿದಂತೆ ಲಕ್ಷಾಂತರ ಜನರ ಮಾರಣಹೋಮ ನಡೆಸಿದ ದಕ್ಷಿಣದ ಔರಂಗಜೇಬ ಎನಿಸಿಕೊಂಡ ಕ್ರೂರಿ, ಮತಾಂಧ ಟಿಪ್ಪುವಿನ ಜಯಂತಿಯನ್ನು ಸರ್ಕಾರವೇ ಅಧಿಕೃತವಾಗಿ ಆಚರಿಸುವುದು ಸರಿಯಲ್ಲ ಎಂಬ ಕೂಗು ರಾಜ್ಯಾದ್ಯಂತ ಕೇಳಿಬಂತು. ಕಾನೂನು ಸುವ್ಯವಸ್ಥೆ ಕಾಪಾಡಬೇಕಾದ ಸರ್ಕಾರ ಒಂದು ಸಮುದಾಯದ ಓಲೈಕೆಗಾಗಿ ಪ್ರತಿಭಟನಕಾರರನ್ನು ಹತ್ತಿಕ್ಕಿ ಲಾಠಿ ಚಾರ್ಜ್ ಮಾಡಿ ಪೊಲೀಸ್ ಬಂದೋಬಸ್ತಿನಲ್ಲಿ ಟಿಪ್ಪು ಜಯಂತಿ ಆಚರಿಸಿತು. ಇದರ ಅಗತ್ಯವಾದರೂ ಏನಿತ್ತು? ಕನ್ನಡನಾಡಿನಲ್ಲಿ ಮಹಾಪುರುಷರಿಗೆ ಕೊರತೆಯಿತ್ತೆ? ಸಿದ್ದರಾಮಯ್ಯನವರಿಗೇ ಟಿಪ್ಪುವಿನಲ್ಲಿ ಕಂಡಂತಹ ಅಂತಹ ಆದರ್ಶ ಯಾವುದು? ಕ್ರೂರಿ ಟಿಪ್ಪು ಜಯಂತಿಯ ಆಚರಣೆಯ ಮೂಲಕ ಸಿದ್ದರಾಮಯ್ಯ ಹಿಂಸೆಗೆ ಪ್ರೋತ್ಸಾಹಿಸಿದಂತೆಯೇ ಆಯಿತಲ್ಲವೇ?

ಜನಪ್ರಿಯತೆಯ ಹುಚ್ಚಿನ ಕೆಲ 'ಭಾಗ್ಯ'ಗಳಿಗೆ ಹೊರತಾಗಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಕರ್ನಾಟಕಕ್ಕೆ ನೀಡಿದ್ದು ಅಪರಾಧಿಗಳ ಜಿಹಾದಿಗಳ ರಾಜ್ಯ, ಭಯೋತ್ಪಾದಕರ ಆಶ್ರಯತಾಣ ಮುಂತಾದ ಬಿರುದುಗಳಷ್ಟೇ. ಒಂದು ಕಾಲದಲ್ಲಿ ರಾಷ್ಟ್ರೀಯತೆಯ ಮುಖ್ಯವಾಹಿನಿಯಲ್ಲಿ ಭಾಗಿಯಾಗಿ ದಕ್ಷಿಣ ಭಾರತದ ಅತ್ಯಂತ ಶಾಂತಿಯುತ ರಾಜ್ಯ ಹಾಗೂ ಸಾಹಿತ್ಯ–ಸಂಸ್ಕೃತಿಗಳಿಗೆ ಹೆಸರುವಾಸಿಯಾಗಿದ್ದ ಕರ್ನಾಟಕ ಇದೀಗ ನಕ್ಸಲರ, ಮತಾಂಧರ ಹಾಗೂ ಜಿಹಾದಿಗಳ ಆಶ್ರಯತಾಣವಾಗಿ ಬದಲಾಗುತ್ತಿದೆ. ಕಳೆದ ನಾಲ್ಕೂವರೆ ವರ್ಷಗಳಲ್ಲಿ ಈ ರಾಜ್ಯದಲ್ಲಿ ಜನರ ಜೀವದ ಬೆಲೆ ಇಷ್ಟು ಅಗ್ಗವಾಗಿ ಹೋಗಿದೆ ಎಂಬಂತಾಗಿದೆ. ಬರೋಬ್ಬರಿ ಇಪ್ಪತ್ತು ಮಂದಿ ಹಿಂದೂ ಕಾರ್ಯಕರ್ತರ ಹತ್ಯೆಗಳು ನಡೆದಿವೆ. ಹೊನ್ನಾವರದ ಮೀನುಗಾರ ಕುಟುಂಬದ ಯುವಕ ಪರೇಶ್ ಮೇಸ್ತ ಸಾವು ಬರ್ಬರ ಹತ್ಯಾಸರಣಿಗೆ ಇತ್ತೀಚಿನ ಸೇರ್ಪಡೆ. ಇದನ್ನೆಲ್ಲ ನೋಡುತ್ತಿದ್ದರೆ ಕರ್ನಾಟಕ ಮತ್ತೊಂದು ಕಾಶ್ಮೀರ, ಕೇರಳ, ಪಶ್ಚಿಮ ಬಂಗಾಳ ಆಗುತ್ತಿರುವ ಲಕ್ಷಣಗಳು ದಟ್ಟವಾಗುತ್ತಿವೆ.

ಕಳೆದ 40 ವರ್ಷಗಳಿಂದ ದೂರದ ಜಮ್ಮು–ಕಾಶ್ಮೀರದಲ್ಲಿ ಪ್ರತ್ಯೇಕತಾವಾದಿ, ಮೂಲಭೂತವಾದಿ, ಜಿಹಾದಿ ಮುಸ್ಲಿಂ ಸಂಘಟನೆಗಳಿಗೆ ಸೇರಿದ ಉಗ್ರರು ಅಮಾಯಕ ಹಿಂದುಗಳ ನೆತ್ತರನ್ನು ಅವ್ಯಾಹತವಾಗಿ ಹರಿಸುತ್ತಿರುವುದು ನಮಗೆಲ್ಲ ಗೊತ್ತೇ ಇದೆ. ವೋಟ್ ಬ್ಯಾಂಕ್ ರಾಜಕಾರಣವನ್ನೇ ಮೈಗೂಡಿಸಿಕೊಂಡಿದ್ದ ಕಾಂಗ್ರೆಸ್ ನೇತೃತ್ವದ ಕೇಂದ್ರ ಮತ್ತು ರಾಜ್ಯಗಳ ಸರ್ಕಾರಗಳಿಗೆ ಅದೊಂದು ಗಂಭೀರ ವಿಷಯವೆನಿಸಲೇ ಇಲ್ಲ. ಹೀಗಾಗಿ ಕಾಶ್ಮೀರದಲ್ಲಿ ತಲೆಯೆತ್ತಿದ ಪ್ರತ್ಯೇಕತಾವಾದಿ, ವಿಭಜಕ ಮುಸ್ಲಿಂ ಮತಾಂಧ ಶಕ್ತಿಗಳು ಮುಂಬೈ, ದೆಹಲಿ, ಹೈದರಾಬಾದ್ ನಂತರ ಇದೀಗ ಕರ್ನಾಟಕವನ್ನೂ ಕಬಂಧ ಬಾಹುಗಳಿಂದ ಬಿಗಿದಪ್ಪಿಕೊಳ್ಳುತ್ತಿವೆ. ಆಗ ಐಎಸ್ಐ, ಇದೀಗ ಇಂಡಿಯನ್


*2ನೇ ಪುಟಕ್ಕೆ...*


### ಮತಾಂಧ ಉಗ್ರಗಾಮಿಗಳಿಗೆ ಬಿಡುಗಡೆ ಭಾಗ್ಯ!

ಕರ್ನಾಟಕದಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ಮೊದಲು ಮಾಡಿದ ಘನಂಧಾರಿ ಕೆಲಸವೆಂದರೆ ಬೆಂಗಳೂರು, ಮಂಗಳೂರು ಸೇರಿ ರಾಜ್ಯದ ವಿವಿದೆಡೆಗಳಲ್ಲಿ ಕೋಮುಗಲಭೆ, ಕೊಲೆ, ಹಿಂಸಾಚಾರಗಳನ್ನು ನಡೆಸಿದ ಆರೋಪಗಳಲ್ಲಿ ಬಂಧಿತರಾಗಿದ್ದ ಸುಮಾರು 1700ಕ್ಕೂ ಅಧಿಕ ಸಿಮಿ, ಕೆಎಫ್‌ಡಿ, ಪಿಎಫ್‌ಐ, ಎಸ್‌ಡಿಪಿಐ ಸಂಘಟನೆಗಳಿಗೆ ಸೇರಿದ ಕೈದಿಗಳಿಗೆ ಬಿಡುಗಡೆ ಭಾಗ್ಯ ಕರುಣಿಸಿದ್ದು.

### ಇದಕ್ಕೆ ಅಂತ್ಯ ಯಾವಾಗ?

ಹೊನ್ನಾವರ ತಾಲೂಕಿನ ಚಂದಾವರ ಗ್ರಾಮದ ಬಡ ಮೀನುಗಾರ ಕುಟುಂಬಕ್ಕೆ ಸೇರಿದ 21 ವರ್ಷದ ಪರೇಶ ಮೇಸ್ತ ಅವರನ್ನು ಡಿಸೆಂಬರ್ 6, 2017ರಂದು ಜಿಹಾದೀ ಕೊಲೆಗಡುಕರು ಅಪಹರಿಸಿ ದಾರುಣವಾಗಿ ಹಿಂಸಿಸಿ ಕೊಂದಿರುವುದು ರಾಜ್ಯದ ತೀರಾ ಇತ್ತೀಚಿನ ಘಟನೆ. ಪಿಎಫ್‌ಐ ಸಂಘಟನೆಯ ಕೋಮು ಪ್ರಚೋದಕ ಮೆರವಣಿಗೆಯ ಹಿಂಸಾಚಾರದ ಫಲವಾಗಿ ಶಿವಮೊಗ್ಗದ ವಿಶ್ವನಾಥ್ (2015 ಫೆಬ್ರುವರಿ 19) ಜೀವ ಕಳೆದುಕೊಂಡರು. ಗೋ–ರಕ್ಷಣೆಯಲ್ಲಿ ತೊಡಗಿಸಿಕೊಂಡಿದ್ದ ಮೂಡಬಿದರೆಯ ಹೂವಿನ ವ್ಯಾಪಾರಿ ಪ್ರಶಾಂತ್ ಪೂಜಾರಿ (2015 ಅಕ್ಟೋಬರ್ 9) ಮುಸ್ಲಿಂ ಮತಾಂಧರಿಗೆ ಬಲಿಯಾದರು. ಅನಧಿಕೃತ ಒತ್ತುವರಿ ಮಾಡಿ ಅಕ್ರಮವಾಗಿ ಕಟ್ಟುತ್ತಿದ್ದ ಮಸೀದಿಯನ್ನು ಕಾನೂನಾತ್ಮಕವಾಗಿ ವಿರೋಧಿಸಿದ ಮೈಸೂರಿನ ರಾಜು(2016 ಮಾರ್ಚ್ 13) ಜಿಹಾದೀ ಮುಸ್ಲಿಮರಿಂದ ಹತರಾದರು. 2016 ಆಗಸ್ಟ್ 14ರಂದು ಕುಶಾಲನಗರದ ಜಾಗರಣ ವೇದಿಕೆಯ ಸಕ್ರಿಯ ಸದಸ್ಯ ಪ್ರವೀಣ್ ಪೂಜಾರಿ ಪಿಎಫ್‌ಐ ಹಂತಕರಿಂದ ಕೊಲೆಗೀಡಾದರು. ಅದೇ ವರ್ಷದ ಅಕ್ಟೋಬರ್‌ನಲ್ಲಿ ಬೆಂಗಳೂರಿನ ಶಿವಾಜಿನಗರದ ಬಿಜೆಪಿಯ ಮಂಡಲಾಧ್ಯಕ್ಷ ರುದ್ರೇಶ್ ಅವರ ಸಕ್ರಿಯತೆಯನ್ನು ಸಹಿಸದ ಮುಸ್ಲಿಂ ಸ್ಥಳೀಯರು ಕೇರಳದ ಕೊಲೆಗಡುಕರ ಸಹಕಾರದೊಂದಿಗೆ ಹತ್ಯೆ ಮಾಡಿದರು. 2016ರ ಟಿಪ್ಪು ಜಯಂತಿ ಮಾಗಳಿಯ ಬಿಜೆಪಿ ಯುವಮೋರ್ಚಾದ ರವಿ ಅವರನ್ನು ಬಲಿ ತೆಗೆದುಕೊಂಡಿತು. 2017 ಜುಲೈನಲ್ಲಿ ಆರೆಸ್ಸೆಸ್ ಕಾರ್ಯಕರ್ತ 28 ವರ್ಷದ ಶರತ್ ಮಡಿವಾಳ ಮತಾಂಧರ ಹಲ್ಲೆಗೆ ಬಲಿಯಾದರು. ಹೀಗೆ 20ಕ್ಕೂ ಅಧಿಕ ಹಿಂದೂ ಕಾರ್ಯಕರ್ತರ ಹತ್ಯೆ ನಡೆದಿದೆ. ಇದಕ್ಕೆ ಕೊನೆ ಯಾವಾಗ? ಎನ್ನುವುದು ನಾಗರಿಕರ ಪ್ರಶ್ನೆ.



## ಎಲ್ಲೋ ಕೇಳಿದ ಕಥೆ

ಒಂದೂರಿನಲ್ಲಿ ಬೆಸ್ತನೊಬ್ಬ ಮೀನನ್ನು ಹಿಡಿಯುತ್ತಿದ್ದ. ಒಂದು ಹದ್ದು ಬಂದು ಒಂದು ಮೀನನ್ನು ಕಚ್ಚಿಕೊಂಡಿತು. ಮೀನನ್ನು ಕಂಡೊಡನೆಯೇ ನೂರಾರು ಕಾಗೆಗಳು ಅದನ್ನು ತೆಗೆದುಕೊಳ್ಳಲು ಕೂಗಾಟವೆಬ್ಬಿಸಿದವು. ಹದ್ದು ಯಾವ ಕಡೆಗೇ ಹೋದರೂ ಕಾಗೆಗಳು ಅದನ್ನು ಹಿಂಬಾಲಿಸಿದವು.

ಹದ್ದು ಉತ್ತರಕ್ಕೆ ಹಾರಿತು, ಕಾಗೆಗಳು ಅದನ್ನು ಹಿಂಬಾಲಿಸಿದವು. ಹದ್ದು ಪೂರ್ವ ಮತ್ತು ಪಶ್ಚಿಮಕ್ಕೆ ಹಾರಿತು. ಕಾಗೆಗಳು ಅಲ್ಲಿಯೂ ಅದನ್ನು ಬಿಡಲಿಲ್ಲ. ಗಾಬರಿಯಿಂದ ಹದ್ದು ಹಾರಾಡುತ್ತಿದ್ದಾಗ ಅದು ಕಚ್ಚಿಕೊಂಡಿದ್ದ ಮೀನು ಕೆಳಗೆಬಿತ್ತು. ಕಾಗೆಗಳು ಹದ್ದನ್ನು ಹಾಗೆಯೇ ಬಿಟ್ಟು ಮೀನನ್ನು ಹಿಂಬಾಲಿಸಿದವು.

ಈ ಗೊಂದಲದಿಂದ ಪಾರಾದ ಮೇಲೆ ಹದ್ದು ಒಂದು ಮರದ ಮೇಲೆ ಕುಳಿತುಕೊಂಡು "ಅನಿಷ್ಟ ಮೀನೇ ಇದಕ್ಕೆಲ್ಲ ಕಾರಣ. ಅದನ್ನು ಈಗ ಎಸೆದಿರುವೆನು. ಈಗ ನನಗೆ ಶಾಂತಿ" ಎಂದು ಯೋಚಿಸಿತು.

ಎಲ್ಲಿಯವರೆಗೆ ಒಬ್ಬನಲ್ಲಿ ಮೀನಿದಿಯೋ, ಅಂದರೆ ಪ್ರಾಪಂಚಿಕ ಆಸೆ ಆಕಾಂಕ್ಷೆಗಳಿವೆಯೋ ಅಲ್ಲಿಯವರೆಗೂ ತೊಂದರೆ ತಾಪತ್ರಯ ತಪ್ಪಿದ್ದಲ್ಲ. ಯಾವಾಗ ಅವನು ಅದನ್ನು ತ್ಯಜಿಸುವನೋ ಆಗ ಅವನಿಗೆ ಗಲಿಬಿಲಿಯೆಲ್ಲ ಹೋಗಿ ಪ್ರಶಾಂತಿಯನ್ನು ಅನುಭವಿಸುವನು.

---

*1ನೇ ಪುಟದಿಂದ...*

## ಸಿದ್ದರಾಮಯ್ಯನವರ ಪ್ರಜಾಪ್ರಭುತ್ವ ವಿರೋಧಿ ಸರ್ಕಾರ

ಮುಜಾಹಿದೀನ್, ಪಿಎಫ್ಐ, ಕೆಎಫ್‌ಡಿ, ಎಸ್‌ಡಿಪಿಐ, ಐಎಸ್ಐಎಸ್ ಹೆಸರಿನಲ್ಲಿ ಕಾರ್ಯಾಚರಿಸುತ್ತಿವೆ. ಅವುಗಳ ಹೆಸರು ಮಾತ್ರ ಬೇರೆ ಬೇರೆ; ಗುರಿ ಮತ್ತು ಮಾರ್ಗಗಳೆಲ್ಲವೂ ಒಂದೇ ಆಗಿದೆ. ಆಡಳಿತಾರೂಢ ಸಿದ್ದರಾಮಯ್ಯ ಸರ್ಕಾರ ಇವನ್ನೆಲ್ಲ ಕಂಡೂ ಕಾಣದಂತಿರುವ ಮೂಲಕ ಇವುಗಳಿಗೆ ಪರೋಕ್ಷ ಬೆಂಬಲ ನೀಡುತ್ತಿರುವುದು ಪರಿಸ್ಥಿತಿಯ ಕರಾಳತೆಯನ್ನು ಮತ್ತಷ್ಟು ಹೆಚ್ಚಿಸಿದೆ.

ಒಂದರಮೇಲೊಂದರಂತೆ ನಡೆಯುತ್ತಿರುವ ಎಲ್ಲ ಹತ್ಯೆಗಳಿಗೂ ಪರಸ್ಪರ ಸಾಮ್ಯತೆಯಿದ್ದರೂ ಒಂದೇ ಒಂದು ಪ್ರಕರಣದಲ್ಲಿಯೂ ಆರೋಪಿಗಳನ್ನು ಬಂಧಿಸಿ ಶಿಕ್ಷಿಸುವಲ್ಲಿ ಸರ್ಕಾರ ವಿಫಲವಾಗಿದೆ. ಬೆಂಗಳೂರಿನ ರುದ್ರೇಶ್, ಶಿವಮೊಗ್ಗದ ವಿಶ್ವನಾಥ, ಮೈಸೂರಿನ ಮಾಗಳಿ ರವಿ, ಬಂಟ್ವಾಳದ ಶರತ್ ಮಡಿವಾಳ ಹಂತಕರು ಕೆಎಫ್‌ಡಿ, ಎಸ್‌ಡಿಪಿಐಗೆ ಸೇರಿದವರು ಎಂಬುದು ಸ್ಪಷ್ಟವಾಗಿ ತಿಳಿದರೂ ಆರೋಪಿಗಳನ್ನು ಬಂಧಿಸುವ ಹಾಗೂ ಸಿಕ್ಕಿದ ಆರೋಪಿಗಳನ್ನು ತನಿಖೆಗೆ ಒಳಪಡಿಸಿ ಶಿಕ್ಷಿಸುವ ಪ್ರಯತ್ನವಾಗಲೀ ನಡೆಸದೇ ದ್ವಂದ್ವ ನೀತಿ ಅನುಸರಿಸುತ್ತಿರುವುದು ರಾಜ್ಯದ ಬಹುಸಂಖ್ಯಾತ ಹಿಂದೂಗಳನ್ನು ಆತಂಕದಲ್ಲಿ ನಿಲ್ಲಿಸಿದೆ.

ಸಿದ್ದರಾಮಯ್ಯ ಸರ್ಕಾರದಲ್ಲಿ ಕೇವಲ ಹಿಂದು ಕಾರ್ಯಕರ್ತರಿಗೆ ಮಾತ್ರವಲ್ಲ, ಸರ್ಕಾರಿ ಅಧಿಕಾರಿಗಳಿಗೂ, ಪ್ರಾಮಾಣಿಕ ಪೊಲೀಸ್ ಅಧಿಕಾರಿಗಳಿಗೂ ರಕ್ಷಣೆ ಇಲ್ಲ ಎಂಬ ವಾತಾವರಣ ನಿರ್ಮಾಣವಾಗಿದೆ. ದಕ್ಷತೆಗೆ ಹೆಸರಾದ ಐಎಎಸ್ ಅಧಿಕಾರಿ ಡಿ.ಕೆ. ರವಿ, ಡಿವೈಎಸ್ಪಿ ಗಣಪತಿ, ಪೊಲೀಸ್ ಇನ್‌ಸ್ಪೆಕ್ಟರ್ ಕಲ್ಲಪ್ಪ ಹಂಡಿಭಾಗ್ ಅಸಹಜ ಸಾವು ಇದನ್ನು ನಿರೂಪಿಸುತ್ತವೆ. ಅಧಿಕಾರಕ್ಕಾಗಿ ಎಂತಹ ರಾಜಿಮಾಡಿಕೊಳ್ಳಲೂ ಈ ಸರ್ಕಾರ ಹೇಸದು ಹಾಗೂ ಇದಕ್ಕಾಗಿ ಸರ್ಕಾರಿ ಯಂತ್ರವನ್ನು ಹೇಗೆ ದುರುಪಯೋಗಪಡಿಸಿಕೊಳ್ಳುತ್ತಿದೆ ಎಂಬುದಕ್ಕೆ ಡಿವೈಎಸ್‌ಪಿ ಗಣಪತಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ರಾಜ್ಯ ಸರ್ಕಾರಕ್ಕೆ ಕೊಟ್ಟ ತಪರಾಕಿಯೇ ಸಾಕ್ಷಿ. ದಕ್ಷ ಅಧಿಕಾರಿಗಳಿಗೆ ಸರ್ಕಾರದಲ್ಲಿ ಯಾವ ಬೆಲೆಯಿದೆ ಎಂಬುದಕ್ಕೆ ಡಿಜಿಪಿ ಡಿ. ರೂಪಾ ಎತ್ತಂಗಡಿ ಪ್ರಕರಣವೇ ಉತ್ತಮ ಉದಾಹರಣೆ. ಇಷ್ಟು ಸಾಲದ್ದಕ್ಕೆ ಯೋಗೀಶ ಗೌಡ ಕೊಲೆ ಆರೋಪ ಹೊತ್ತ ವಿನಯ ಕುಲಕರ್ಣಿ ಎಂಬ ಸಚಿವರನ್ನು ಮಗ್ಗುಲಲ್ಲಿಟ್ಟುಕೊಂಡು ಬಚಾವ್ ಮಾಡಲಾಗುತ್ತಿದೆ. ಗಣಪತಿ ಕೇಸನ್ನೇ ಮುಚ್ಚಿಹಾಕಿದವರಿಗೆ ಇದೇಲ್ಲ ದೊಡ್ಡ ಕೆಲಸವಲ್ಲ ಬಿಡಿ!

ಇಂತಹ ಸರ್ಕಾರದಿಂದ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ, ಪ್ರಜಾತಂತ್ರ ಮಾದರಿ ಆಡಳಿತವನ್ನು ನಿರೀಕ್ಷೆ ಮಾಡಬಹುದೇ? ಇದನ್ನು ಇನ್ನೆಷ್ಟು ಸಹಿಸಬೇಕು? ಇನ್ನೆಷ್ಟು ಅಮಾಯಕರ ರಕ್ತ ಚೆಲ್ಲಬೇಕು? ಜನರ ಭಾವನೆಗಳನ್ನು, ನಂಬಿಕೆಗಳನ್ನು ಗೌರವಿಸುವ, ಕಾನೂನನ್ನು ಎತ್ತಿ ಹಿಡಿಯುವ ಸರ್ಕಾರವೊಂದರ ಅಗತ್ಯವಿದೆ ಎಂದು ನಿಮಗನಿಸುವುದಿಲ್ಲವೇ?


## ಪುಸ್ತಕದಿಂದ...

### ಸ್ನೇಹಿತ

ಮಲೆಯಾಳ ಭಾಷೆಯಲ್ಲಿ ಒಂದು ಗಾದೆ ಉಂಟು :
'ಸಂಗಾತಿ ಒಳ್ಳೆಯವನಿದ್ದರೆ ಕನ್ನಡಿ ಬೇಕಾಗಿಲ್ಲ.'

ಮನಸ್ಸಿನಲ್ಲಿ ಉಳಿದುಕೊಳ್ಳುವ ವ್ಯಸನ, ದುಃಖ, ಭಯ ಮೊದಲಾದವನ್ನು ಯಾರಲ್ಲಾದರೂ ಹೇಳಿದರೆ ಮನಸ್ಸಿಗೆ ಶಾಂತಿ ದೊರಕುವುದು ಎಂದೆನಿಸುತ್ತದೆ. ಆಗ ನೆಂಟರಿಗಿಂತ ಮಿತ್ರರನ್ನು ಹುಡುಕಿಕೊಂಡು ಹೋಗುತ್ತೇವೆ.

ಹೆಗ್ಗುರುತು: ನಮ್ಮ ಉಡುಪು ಕಳಚಿಕೊಂಡರೆ ಥಟ್ಟನೆ ಕೈ ಚಟುವಟಿಕೆಯಿಂದ ಅದನ್ನು ಸರಿಪಡಿಸುತ್ತದೆ. ನಮ್ಮ ಮಿತ್ರರಿಗೆ ಯಾವುದಾದರೂ ಕಷ್ಟಬಂದರೆ ಯಾವ ಆಹ್ವಾನವೂ ಇಲ್ಲದೇ ನಾವೇ ಓಡೋಡಿ ಹೋಗಿ ಅದನ್ನು ನೀಗಿಸಲು ಪ್ರಯತ್ನಿಸುವುದು ಸ್ನೇಹದ ಹೆಗ್ಗುರುತು. ಇದು ಒಬ್ಬ ಕವಿ ಹೇಳಿದ ಮಾತು.




ಕುಚೇಲನಿಗೂ ಶ್ರೀಕೃಷ್ಣನಿಗೂ ಇದ್ದ ಸ್ನೇಹ ಸಂಬಂಧ ಎಷ್ಟು ಸುಂದರವಾದದ್ದು, ಆಳವಾದದ್ದು! ಸ್ನೇಹವೆನ್ನುವುದು ಎಲ್ಲ ಅಂಕೆಗಳನ್ನು ಮೀರಿರುವಂತಹದ್ದು. ಒಂದು ಹಿಡಿ ಅವಲಕ್ಕಿಗಾಗಿ ಸರ್ವಸ್ವವನ್ನೂ ಕೊಡಲು ಶ್ರೀಕೃಷ್ಣ ಸಿದ್ಧನಾಗಿದ್ದ.

ಸ್ನೇಹ, ಪ್ರತಿಫಲ ಎದುರುನೋಡದಂತಹುದು. ತನಗೆ ಕಷ್ಟಬಂದರೆ ಯಾರಾದರೂ ಇರಬೇಕಲ್ಲ ಎಂದುಕೊಂಡು ಸ್ನೇಹಿತನನ್ನು ಹುಡುಕುವುದು ವ್ಯಾಪಾರವಾಗುತ್ತದೆ.

ಸಿನಿಮಾ ಗೆಳೆಯರು, ಇಸ್ಪೀಟ್ ಆಟದ ಒಡನಾಡಿಗಳು, ಕಾಫಿ ಮಿತ್ರರು ಎಂದು ಹಲವು ತರಹದ ಗೆಳೆಯರು ಇರುತ್ತಾರೆ. ಅವರುಗಳಿಗೆಲ್ಲ ನಮ್ಮಿಂದ ಏನಾದರೂ ಸಿಗುವವರೆಗೆ ಮಾತ್ರ ಸ್ನೇಹವಿರುತ್ತದೆ. ಏನು ಬೇಕಾದರೂ ಕೊಡಬಲ್ಲ ಸ್ಥಿತಿಯಲ್ಲಿ ನಾವು ಇಲ್ಲದಿದ್ದರೆ ಅವರುಗಳು ಬಿಡಿಸಿಕೊಳ್ಳುತ್ತಾರೆ. ಕೊಳದಲ್ಲಿ ನೀರಿರುವವರೆಗೂ ಪಕ್ಷಿಗಳು ಬಂದು ಕೂಡುತ್ತವೆ. ಕೊಳಬತ್ತಿ ಹೋದರೆ ಹಾರಿಬಿಡುತ್ತವೆ. ಆದರೆ ಆ ಕೊಳದಲ್ಲಿ ಬೆಳೆದಿದ್ದ ನಿರ್ಬಳ್ಳಿಗಳು ನೀರ್ಪುಷ್ಪಗಳು ಬಿಳಿ ಹೂವುಗಳು ಮೊದಲಾದ ಗಿಡಬಳ್ಳಿಗಳು ಅಲ್ಲಿಯೇ ಉಳಿದುಕೊಳ್ಳುತ್ತವೆ – ಹೀಗೆಂದು ಹೇಳುವ ಒಂದು ಹಾಡು ಇದೆ.

ಪುಸ್ತಕದ ಹೆಸರು: **'ತಿಳಿವು ಗೆಲುವು'**
ಮೂಲ ಲೇಖಕರು : **ರಾಮ ಗೋಪಾಲನ್**
ಕನ್ನಡ ಅನುವಾದಕರು : **ಚಿರಂಜೀವಿ**



**ಹೆಸರು:** ಕೇಂಕಾಥ್

**ಮೂಲ:** ಉತ್ತರ ಪ್ರದೇಶದ ಕೇನ್ ನದಿ ತೀರ ಪ್ರದೇಶಗಳಲ್ಲಿ ಹಾಗೂ ಮಧ್ಯಪ್ರದೇಶದ ತಿಕಾಮಗಢ ಜಿಲ್ಲೆಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ.

**ವಿಶೇಷತೆ:** ಗಾತ್ರದಲ್ಲಿ ಚಿಕ್ಕದು, ಗಟ್ಟಿಮುಟ್ಟಾಗಿದ್ದು ಶಕ್ತಿಯುತವಾಗಿರುತ್ತವೆ. ಕೃಷಿಗೆ ಹಾಗೂ ಭಾರವಹನೆಗೆ (ತೂಕದ ವಸ್ತುಗಳ ಸಾಗಾಣಿಕೆಗೆ) ಸೂಕ್ತ. ವಿಷಮ ಪರಿಸ್ಥಿತಿಯಲ್ಲಿಯೂ ಅತಿ ಕಡಮೆ ಆಹಾರ ಸೇವಿಸಿ ಬದುಕಬಲ್ಲದು.

## ಸತ್ಯೇಂದ್ರನಾಥ ಬೋಸ್
### (ಜನವರಿ 1, 1894 – ಫೆಬ್ರುವರಿ 4, 1974)



ಜಗತ್ಪ್ರಸಿದ್ಧ ಭೌತವಿಜ್ಞಾನಿ ಮತ್ತು ಗಣಿತಜ್ಞ ಸತ್ಯೇಂದ್ರನಾಥ ಬೋಸ್ ಜನಿಸಿದ್ದು 1894 ರ ಜನವರಿ 1ರಂದು ಕೋಲ್ಕತ್ತದಲ್ಲಿ. ಇವರ ತಂದೆ ಸುರೇಂದ್ರನಾಥ್ ರೈಲ್ವೆ ಇಲಾಖೆಯಲ್ಲಿ ಉದ್ಯೋಗಿ. ತಾಯಿ ಆಮೋದಿನೀ ದೇವಿ. ಸತ್ಯೇಂದ್ರನಾಥರಿಗೆ ಚಿಕ್ಕಂದಿನಿಂದಲೂ ಗಣಿತಶಾಸ್ತ್ರದಲ್ಲಿ ಅಪಾರವಾದ ಆಸಕ್ತಿ.

ಕೋಲ್ಕತ್ತದ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿ, 1915ರಲ್ಲಿ ಎಂಎಸ್ಸಿ ಪದವಿ ಪಡೆದರು. 1916ರಿಂದ 1921ರ ವರೆಗೆ ಕೋಲ್ಕತ್ತ ವಿಶ್ವವಿದ್ಯಾನಿಲಯದಲ್ಲಿ ಭೌತಶಾಸ್ತ್ರದ ಅಧ್ಯಾಪಕರಾಗಿ ಕೆಲಸ ಮಾಡಿದರು. ನಂತರ ಢಾಕಾ ವಿಶ್ವವಿದ್ಯಾನಿಲಯದಲ್ಲಿ ಭೌತಶಾಸ್ತ್ರದ ಪ್ರಾಧ್ಯಾಪಕರಾಗಿ 25 ವರ್ಷಗಳ ಕಾಲ ಸೇವೆ ಸಲ್ಲಿಸಿದರು. 1945ರಿಂದ ಕೋಲ್ಕತ್ತಾ ವಿಶ್ವವಿದ್ಯಾನಿಲಯದ ಪ್ರಾದ್ಯಾಪಕರಾಗಿ 11 ವರ್ಷಗಳ ಕಾಲ ಕೆಲಸ ಮಾಡಿದರು.

ಆಗ ಸಂಶೋಧನೆಗಳಿಗೆ ಭಾರತದಲ್ಲಿ ಹೆಚ್ಚು ಪ್ರೋತ್ಸಾಹವಿಲ್ಲದಿದ್ದರೂ ಐನ್‌ಸ್ಟೈನ್‌ನ ಸಾಪೇಕ್ಷ ಸಿದ್ಧಾಂತದ ಸಹಾಯದಿಂದ ಅನಿಲಗಳ ಒತ್ತಡ, ಘನ ಅಳತೆ, ಉಷ್ಣತೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಸಂಶೋಧನೆ ನಡೆಸಿದರು. ರೇಖಾಗಣಿತದ ಕೆಲವು ಹೊಸ ಪ್ರಮೇಯಗಳನ್ನು ರೂಪಿಸಿದರು. ಸಂಖ್ಯಾಶಾಸ್ತ್ರದಲ್ಲಿ ಪ್ರತಿಭಾವಂತರಾಗಿದ್ದ ಅವರ ವಿವರಣೆಗಳಿಂದ ಕ್ವಾಂಟಮ್ ಸಂಖ್ಯಾಶಾಸ್ತ್ರ ಅರ್ಥಮಾಡಿಕೊಳ್ಳಲು ಸುಲಭವಾಯಿತು. ಬೋಸರು ಪ್ಲ್ಯಾಂಕನ ನಿಯಮ ಮತ್ತು ಲೈಟ್ ಕ್ವಾಂಟಮ್ ತತ್ವದ ಕುರಿತು ಬರೆದ ಲೇಖನವನ್ನು ಪ್ರಸಿದ್ಧ ವಿಜ್ಞಾನಿ ಐನ್‌ಸ್ಟೈನ್ ಮೆಚ್ಚಿಕೊಂಡು ಅದನ್ನು ಜರ್ಮನ್ ಭಾಷೆಗೆ ಅನುವಾದಿಸಿದರು. ಪ್ಯಾರಿಸ್‌ಗೆ ತೆರಳಿದ ಬೋಸರು ಅಲ್ಲಿ ಮೇಡಮ್ ಕ್ಯೂರಿ ಅವರ ಪ್ರಯೋಗಶಾಲೆಯಲ್ಲಿ ಪ್ರಯೋಗಗಳನ್ನು ನಡೆಸಿದರು. ಬರ್ಲಿನ್‌ನ ಐನ್‌ಸ್ಟೈನ್‌ರೊಡನೆ ಕೆಲಸ ಮಾಡಿದರು.

ಸತ್ಯೇಂದ್ರನಾಥ ಬೋಸ್ ಶಾಂತಿ ಮತ್ತು ನಿಶ್ಶಸ್ತ್ರೀಕರಣದ ಪ್ರತಿಪಾದಕರು ಕೂಡ ಆಗಿದ್ದರು. ಅವರು ಸೋವಿಯತ್ ಒಕ್ಕೂಟ, ಡೆನ್ಮಾರ್ಕ್, ಚೆಕೊಸ್ಲೊವಾಕಿಯಗಳನ್ನೊಳಗೊಂಡ ಅನೇಕ ದೇಶಗಳಿಗೆ ಭೇಟಿಕೊಟ್ಟರು. ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೇ ಬ್ರಿಟಿಷರ ವಿರುದ್ಧ ಹೋರಾಟಗಳಲ್ಲಿ ಭಾಗವಹಿಸಿದ್ದ ಅವರು ದೇಶದ ಸ್ವಾತಂತ್ರ್ಯದ ಆವಶ್ಯಕತೆಯನ್ನೂ ಚೆನ್ನಾಗಿ ಅರಿತಿದ್ದರು.

ರಸಾಯನಶಾಸ್ತ್ರ, ಜೀವಶಾಸ್ತ್ರ, ಭೂಗರ್ಭಶಾಸ್ತ್ರ, ತತ್ವಜ್ಞಾನ, ಕಲೆ, ಸಾಹಿತ್ಯ ಮೊದಲಾದ ವಿಷಯಗಳಲ್ಲೂ ಅವರಿಗೆ ತೀವ್ರ ಆಸಕ್ತಿಯಿತ್ತು. ವಿಜ್ಞಾನದಲ್ಲಿ ಅವರ ಸೇವೆಯನ್ನು ಮಾನ್ಯ ಮಾಡಿ ಭಾರತ ಸರಕಾರ ಅವರಿಗೆ 1954ರಲ್ಲಿ ಪದ್ಮವಿಭೂಷಣ ಬಿರುದನ್ನು ನೀಡಿತು. ಸಮಾಜಸೇವೆಯು ಬೋಸರ ಜೀವನದಲ್ಲಿ ಜೀವಂತ ಆದರ್ಶವಾಗಿತ್ತು. ಹಣವನ್ನು ಹಿಂಬಾಲಿಸದೇ ತಮ್ಮ ಸರ್ವಸ್ವವನ್ನೂ ವಿಜ್ಞಾನಕ್ಕಾಗಿ, ವಿದ್ಯಾರ್ಥಿಗಳಿಗಾಗಿ ಮತ್ತು ದೀನದಲಿತರ ಸೇವೆಗಾಗಿ ಅರ್ಪಿಸಿದರು. ತಮ್ಮ ಜೀವನವನ್ನೇ ರಾಷ್ಟ್ರಕ್ಕಾಗಿ ಮುಡಿಪಾಗಿಟ್ಟು ಜನರಿಗೆ ಉಜ್ವಲ ಮೇಲ್ಪಂಕ್ತಿಯನ್ನು ಹಾಕಿಕೊಟ್ಟರು.

ಸತ್ಯೇಂದ್ರನಾಥ್ ಬೋಸ್ 1974ರ ಫೆಬ್ರವರಿ 4ರಂದು ನಿಧನ ಹೊಂದಿದರು. ಬೋಸರ ಮರಣ ನಮ್ಮ ದೇಶಕ್ಕಷ್ಟೇ ಅಲ್ಲದೆ ಇಡೀ ಜಗತ್ತಿಗೆ ಹಾಗೂ ವಿಜ್ಞಾನ ಪ್ರಪಂಚಕ್ಕೆ ವಿಶೇಷ ನಷ್ಟವೇ ಸರಿ.

**ಸಂಪಾದಕೀಯ ಸಹಕಾರ** ಶೈಲೇಶ್ ಕುಲಕರ್ಣಿ, ಶ್ರೀನಿವಾಸ್ ಹೆಗಡೆ, ಪ್ರತಾಪ್ ಕೊಡಂಚ, ರಾಧಾಕೃಷ್ಣ ಹೊಳ್ಳ, ಅನಿಲ್‌ಕುಮಾರ್ ಮೊಳಹಳ್ಳಿ, ಸತ್ಯಾನಾರಾಯಣ ಶಾನಭಾಗ್



ದೇಶಕ್ಕಾಗಿ ದುಡಿಯಲು ತನಗೆ ಸಿಕ್ಕಿದ್ದ ಅಮೆರಿಕದ ದೊಡ್ಡ ಸಂಬಳದ ಕೆಲಸ ಮತ್ತು ಐಐಎಂನ ಪ್ರವೇಶ ಎರಡನ್ನೂ ತಿರಸ್ಕರಿಸಿ ಯುವಕನೊಬ್ಬ ಭಾರತೀಯ ಸೇನೆಗೆ ಸೇರಿ ದೇಶಪ್ರೇಮ ಮೆರೆದಿದ್ದಾರೆ. ಹೈದರಾಬಾದ್‌ನ ಬರ್ನಾನ ಯಾದಿಗಿರಿ ಎಂಬ ಯುವಕನ ಕಥೆಯಿದು. ಇತನ ತಂದೆ ಸಿಮೆಂಟ್ ಕಾರ್ಖಾನೆಯಲ್ಲಿ ದಿನಗೂಲಿ ನೌಕರರು. ತಾಯಿ ಪೋಲೀಯೋ ಪೀಡಿತೆ. ಒಟ್ಟಾರೆ ಕುಟುಂಬದ ಆದಾಯ ತಂದೆ ತರುತ್ತಿದ್ದ ದಿನಗೂಲಿ 60 ರೂ. ಈ ಕಷ್ಟಗಳ ನಡುವೆ ಹೈದರಾಬಾದ್‌ನ ಪ್ರತಿಷ್ಠಿತ ಐಐಟಿಯಲ್ಲಿ ತಾಂತ್ರಿಕ ಪದವಿ ಪೂರೈಸಿದ. ಇವರ ಪ್ರತಿಭೆಯನ್ನು ಗುರುತಿಸಿ ಅಮೆರಿಕದ ಪ್ರತಿಷ್ಠಿತ ಕಂಪೆನಿಯೊಂದು ದೊಡ್ಡ ಕೆಲಸಕ್ಕೆ ಆಹ್ವಾನಿಸಿತು. ಅದೇ ಸಮಯದಲ್ಲೇ ಶೇ. 93.4 ಅಂಕಗಳೊಡನೆ ಐಐಎಂಗೆ ಇಂದೋರ್‌ನಲ್ಲಿ ಪ್ರವೇಶವೂ ದೊರೆಯಿತು. ಆದರೆ ಯಾದಗಿರಿ ಅವರಿಗೆ ದೇಶಕ್ಕಾಗಿ ಏನಾದರೂ ಮಾಡುವ ಬಯಕೆ. ಹೀಗಾಗಿ ಕೈತುಂಬ ಸಂಬಳ ಪ್ರತಿಷ್ಠೆ ಸಿಗುವ ಈ ಎಲ್ಲ ಅವಕಾಶಗಳಿಗೆ ವಿದಾಯ ಹೇಳಿ ಭಾರತೀಯ ಸೇನೆ ಸೇರಿದರು ನಂತರ ಐಎಂಎ ಡೆಹ್ರಾಡೂನ್‌ನ ತಾಂತ್ರಿಕ ವಿಭಾಗದಲ್ಲಿ ಮೊದಲ ಸ್ಥಾನಕ್ಕೆ ಬೆಳ್ಳಿ ಪದಕ ಪಡೆದಿದರು. ಕುಟುಂಬದ ಆರ್ಥಿಕ ಪರಿಸ್ಥಿತಿಯ ನಡುವೆಯೂ ಹಣದ ಹಿಂದೆ ಹೋಗದೇ ತಾಯ್ನಾಡಿನ ಸೇವೆಗಾಗಿ ಎಲ್ಲವನ್ನೂ ತ್ಯಾಗ ಮಾಡಿದ ಯಾದಗಿರಿ ಅವರು, ದೇಶಕಾರ್ಯದಿಂದ ಸಿಗುವ ಆತ್ಮತೃಪ್ತಿ ಎಷ್ಟೇ ಹಣ ಗಳಿಸಿದರೂ ಸಿಗದು ಎನ್ನುತ್ತಾರೆ.

**ತಮ್ಮ ಪುತ್ರನ ವಿವಾಹವನ್ನು ಸರಳ ಹಾಗೂ ಮಾದರಿಯಾಗಿ ನೆರವೇರಿಸಿ ಬಿಹಾರದ ಉಪಮುಖ್ಯಮಂತ್ರಿ ಹಾಗೂ ಭಾರತೀಯ ಜನತಾ ಪಕ್ಷದ ಹಿರಿಯ ನಾಯಕರಾದ ಸುಶೀಲ್ ಕುಮಾರ್ ಮೋದಿ ಅವರು ಆದರ್ಶ ಮೆರೆದಿದ್ದಾರೆ. ರಾಜಕೀಯ ನಾಯಕರ ಕುಟುಂಬದ ಅದ್ದೂರಿ ವಿವಾಹಗಳು ಸಾಮಾನ್ಯವಾಗಿರುವ ಈ ಕಾಲದಲ್ಲಿ ಒಂದು ರಾಜ್ಯದ ಉಪಮುಖ್ಯಮಂತ್ರಿಯಾಗಿ ಈ ಪ್ರವೃತ್ತಿಗೆ ವಿರುದ್ಧವಾಗಿ ಆಡಂಬರವಿಲ್ಲದ ಸರಳ ಮತ್ತು ಅರ್ಥಪೂರ್ಣ ವಿವಾಹವನ್ನು ನಡೆಸಿದ್ದಲ್ಲದೇ, ಮದುವೆಯ ಸ್ಥಳದಲ್ಲಿ ನೆರೆದ ಅತಿಥಿಗಳಿಗೂ ವರದಕ್ಷಿಣೆ ನೀಡದೆ ಮತ್ತು ಪಡೆಯದೇ ಸರಳ ವಿವಾಹ ನಡೆಸುವ ಪ್ರತಿಜ್ಞೆಯನ್ನೂ ಭೋದಿಸಿದರು. ಹಲವಾರು ರಾಜ್ಯ ಹಾಗೂ ರಾಷ್ಟ್ರನಾಯಕರು ಉಪಸ್ಥಿತರಿದ್ದ ಈ ಸರಳ ಸಮಾರಂಭದಲ್ಲಿ ಸ್ವಇಚ್ಛೆಯಿಂದ ಮರಣಾನಂತರ ದೇಹದಾನ ಘೋಷಿಸಲು ಮುಂದಾಗುವವರಿಗೆ ಅವರದೇ ನೇತೃತ್ವದ ಸಂಸ್ಥೆಯೊಂದರ ಕೌಂಟರ್ ಕೂಡ ತೆರದರು. ಬಂದ ಅತಿಥಿಗಳಲ್ಲಿ ಸುಮಾರು 150ಕ್ಕೂ ಅಧಿಕ ಜನರು ತಮ್ಮ ಮರಣಾನಂತರ ದೇಹದಾನ ಮಾಡುವುದಕ್ಕೇ ನೋಂದಾಯಿಸಿಕೊಂಡಿದ್ದು ವಿಶೇಷವಾಗಿತ್ತು. ಅತಿಥಿಗಳನ್ನು ಸರಳವಾಗಿ ಬಿಸಿಯಾದ ಚಹಾ ಮತ್ತು 4 ತಿರುಪತಿ ಲಡ್ಡುಗಳನ್ನು ನೀಡಿ ಸತ್ಕರಿಸಲಾಯಿತು. ಸಮಾರಂಭದಲ್ಲಿ ಉಪಸ್ಥಿತರಿದ್ದ ಹರಿಯಾಣದ ಮುಖ್ಯಮಂತ್ರಿ ಖಟ್ಟರ್ ಅವರು ಇದೊಂದು ಆದರ್ಶ ವಿವಾಹ, ತಮ್ಮ ರಾಜ್ಯದಲ್ಲೂ ಈ ರೀತಿಯ ವಿವಾಹವನ್ನು ಅನುಸರಿಸಲು ಪ್ರಯತ್ನಿಸುವುದಾಗಿ ಹೇಳಿದರು.**



ಹಿಂದಿನ ಎಲ್ಲಾ ಪರ ವಿರೋಧಗಳನ್ನೂ ಮೀರಿ ಈ ಬಾರಿ ತಿರುಪತಿ ತಿರುಮಲ ಧರ್ಮದರ್ಶಿ ಮಂಡಳಿಯು (ಟಿಟಿಡಿ) ದಲಿತ ವರ್ಗಕ್ಕೆ ಸೇರಿದ 200 ಅರ್ಚಕರನ್ನು ನೇಮಿಸಲು ಮುಂದಾಗಿದೆ. ಈ ಬಗ್ಗೆ ದೆಹಲಿಯಲ್ಲಿ ಇತ್ತೀಚೆಗೆ ಪತ್ರಿಕಾಗೋಷ್ಠಿ ನಡೆಸಿ ವಿವರಿಸಿದ ಮಂಡಳಿಯ ಮುಖ್ಯ ವ್ಯವಸ್ಥಾಪಕರಾದ ಅನಿಲ ಸಿಂಘಾಲ್ ಅವರು, ತಥಾಕಥಿತ ಸಮಾಜದ ಕೆಳವರ್ಗದವರನ್ನು ವಿಶ್ವದ ಅತೀ ಶ್ರೀಮಂತ ದೇವಸ್ಥಾನಕ್ಕೆ ಅರ್ಚಕರಾಗಿ ನೇಮಕ ಮಾಡಿಕೊಳ್ಳುತ್ತಿರುವುದು ಒಂದು ಮಹತ್ವವಾದ ಸಾಮಾಜಿಕ ಬದಲಾವಣೆ ಎಂದರು. 3 ತಿಂಗಳು ಕಠಿಣ ತರಬೇತಿ ನೀಡಿ, ಅಲ್ಲಿ ತಯಾರಾಗುವ ದಲಿತ ಅರ್ಚಕರು ಟಿಟಿಡಿಯಿಂದ ನಡೆಸಲ್ಪಡುತ್ತಿರುವ ದೇವಸ್ಥಾನಗಳಲ್ಲಿ ಕಾರ್ಯನಿರ್ವಹಿಸಲಿದ್ದಾರೆ. ಟಿಟಿಡಿ ವತಿಯಿಂದ ಮೀನುಗಾರರು ಹಾಗು ಹಿಂದುಳಿದ ವರ್ಗಗಳ ಕಾಲೋನಿಯಲ್ಲಿ 500ಕ್ಕೂ ಹೆಚ್ಚು ದೇವಸ್ಥಾನಗಳನ್ನು ನಿರ್ಮಿಸಲು ನಿಶ್ಚಯಿಸಲಾಗಿದೆ ಎಂದು ಅವರು ತಿಳಿಸಿದರು.

**ಕಾಶ್ಮೀರದಲ್ಲೀಗ ಬದಲಾವಣೆಯ ಕುರುಹುಗಳು ಕಾಣುತ್ತಿವೆ. ಭದ್ರತಾ ಪಡೆಗಳ ಮೇಲೆ ನಡೆಯುತ್ತಿದ್ದ ಕಲ್ಲೆಸೆತ ಈಗ ಕಾಶ್ಮೀರದ ಕೆಲವೆಡೆ ಉಗ್ರರ ಕಡೆಯೂ ತಿರುಗುತ್ತಿದೆ! ಇತ್ತೀಚೆಗೆ 3 ಉಗ್ರರಿಂದ ನಡೆದ ಬ್ಯಾಂಕ್ ದರೋಡೆ ಪ್ರಯತ್ನವನ್ನು ಸಾರ್ವಜನಿಕರು ಕಲ್ಲೆಸೆತದಿಂದ ವಿಫಲಗೊಳಿಸಿದರು. ಈ ಮೂವರಲ್ಲಿ ಇತ್ತೀಚೆಗಷ್ಟೇ ಅಲ್‌ಖೈದಾ ಜಮ್ಮು ಕಾಶ್ಮೀರ ಘಟಕಕ್ಕೆ ಹೊಸ ಮುಖ್ಯಸ್ಥ ಎನ್ನಲಾದ ಅನ್ಸರ್ ಎಂಬಾತನೂ ಸೇರಿದ್ದ. ಜಮ್ಮು ಮತ್ತು ಕಾಶ್ಮೀರ ಬ್ಯಾಂಕ್‌ನ ನೂರ್ಪೋರಾ ಬ್ರಾಂಚ್‌ನ ದರೋಡೆಗೆ ಕಟ್ಟಡದೊಳಗೆ ನುಗ್ಗಿದ ಉಗ್ರರು ಗುಂಡು ಹಾರಿಸಿದರು. ಗುಂಡಿನ ಶಬ್ದ ಕೇಳಿ ಹತ್ತಿರದಲ್ಲಿದ್ದ ಸಾರ್ವಜನಿಕರೆಲ್ಲಾ ಅವರ ಮೇಲೆ ಕಲ್ಲೆಸೆತ ಪ್ರಾರಂಭಿಸಿದರು. ಇದರಿಂದ ವಿಚಲಿತರಾದ ದರೋಡೆಕೋರ ಉಗ್ರರು ಸಾರ್ವಜನಿಕರ ಮೇಲೆ ಗುಂಡು ಹಾರಿಸುತ್ತಾ ಪರಾರಿಯಾದರು. ಇತ್ತೀಚಿನ ದಿನಗಳಲ್ಲಿ ಭದ್ರತಾಸಂಸ್ಥೆಗಳು ಸಾಮಾಜಿಕವಾಗಿ ಜನರ ಮೇಲೆ ಧನಾತ್ಮಕ ಪ್ರಭಾವ ಬೀರುತ್ತಿರುವುದು ಮತ್ತು ಉಗ್ರರ ವಿರುದ್ಧ ಕಠಿಣ ನಿಲುವು ತಳೆದಿರುವುದು ಉಗ್ರರಿಗೆ ತಲೆನೋವಾಗಿದ್ದು, ಹತಾಶೆಯಿಂದ ಈ ರೀತಿಯ ಕೆಲಸಕ್ಕೆ ಕೈ ಹಾಕುತ್ತಿರುವುದು ಸ್ಪಷ್ಟವಾಗಿದೆ.**

# ಸಾಲುದ್ದದ ಸುದ್ದಿಗಳು

ರಾಜಸ್ಥಾನದ ಎಲ್ಲಾ ಸರ್ಕಾರೀ ಆದೇಶಗಳು ಹಾಗೂ ಸುತ್ತೋಲೆಗಳಲ್ಲಿ ಪಂಡಿತ ದೀನದಯಾಳ ಉಪಾದ್ಯಾಯರ ಭಾವಚಿತ್ರ ಪ್ರಕಟಿಸಲು ರಾಜಸ್ಥಾನ ಸರ್ಕಾರ ಆದೇಶ ಹೊರಡಿಸಿದೆ. ರಾಜ್ಯ ಸರ್ಕಾರದ ಎಲ್ಲಾ ಅಧಿಕೃತ ಸಂವಹನ ಸಂಪರ್ಕಗಳಿಗೂ ಅಶೋಕ ಸ್ಥಂಭದ ಮುದ್ರೆಯೊಂದಿಗೆ ದೀನದಯಾಳರ ಭಾವಚಿತ್ರ ಜೊತೆಯಾಗಲಿದೆ. ದೀನದಯಾಳರ ಜನ್ಮಶತಮಾನದ ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಖಾತೆಯ ಅಧಿಕೃತ ಆದೇಶಗಳಿಗೂ ದೀನದಯಾಳರ ಮುಖಚಿತ್ರ ಬಳಸಲಾಗುತ್ತಿದೆ. ಈ ಹಿಂದೆ ರಾಜಸ್ಥಾನದಲ್ಲಿ ಪಕ್ಷದ ನಿರ್ದೇಶನದಂತೆ ಎಲ್ಲಾ ಬಿ.ಜೆ.ಪಿ ಶಾಸಕರೂ ಕಡ್ಡಾಯವಾಗಿ ತಮ್ಮ ಪತ್ರಗಳ ತಲೆಬರಹದಲ್ಲಿ ದೀನದಯಾಳರ ಭಾವಚಿತ್ರ ಉಪಯೋಗಿಸುತ್ತಿದ್ದಾರೆ.



**ಇವರ ಪೂರ್ಣ ಸಮಯ ಸಾಮಾಜಿಕ ಕಾರ್ಯಕ್ಕೆ ಮೀಸಲು. ದಿನಕ್ಕೆ ಒಂದೇ ಊಟ, ಬದುಕಲು ಬಳಸುವುದು ತಿಂಗಳಿಗೆ ಕೇವಲ 900 ರೂ. ಅದೂ ತಮ್ಮದೇ ಸ್ವಂತ ಪಿಂಚಣಿ ಹಣದಿಂದ. ಓಡಾಡಲು ಕಾರು, ಬೈಕುಗಳಿಲ್ಲ, ಸರ್ಕಾರಿ ಬಸ್ ಅಥವಾ ನಡೆದೇ ಪ್ರಯಾಣ. ತಮ್ಮ ವಿಧಾನಸಭೆ ಸದಸ್ಯತ್ವದಿಂದ ಬರುವ ಸಂಬಳದ ಹಣವನ್ನು ದಾನಮಾಡಿಬಿಡುತ್ತಾರೆ. ಇವರ ಕಳೆದ ವರ್ಷದ ಆದಾಯ ಕೇವಲ ರೂ. 27,000. ಯಾವುದೇ ಹಣ ಖರ್ಚು, ವಿಶೇಷ ಪ್ರಚಾರವಿಲ್ಲದೇ ಕಳೆದ 38 ವರ್ಷಗಳಿಂದ ವಿಧಾನಸಭೆಗೆ ಆಯ್ಕೆಯಾಗುತ್ತಿರುವ ಈ ವ್ಯಕ್ತಿ ಒಬ್ಬ ರಾಜಕಾರಣಿ ಹೀಗೂ ಇರಬಹುದಾ ಎಂದು ಆಲೋಚಿಸುವ ಮಟ್ಟಿಗೆ ಸರಳ ಮತ್ತು ಜನಸೇವೆಗೆ ಜೀವನವನ್ನೇ ಮುಡಿಪಿಟ್ಟು ಜೀವಿಸುತ್ತಿದ್ದಾರೆ. ಅವರೇ ಜುನಾರ್‌ಘಡದ ವಿಧಾನಸಭೆ ಸದಸ್ಯರಾದ ಮಹೇಂದ್ರ ಮಶ್ರು. ಬ್ಯಾಂಕ್ ನೌಕರರಾಗಿದ್ದ ಇವರು ಕೆಲಸಕ್ಕೆ ರಾಜೀನಾಮೆ ನೀಡಿ ಪೂರ್ಣ ಸಮಯ ಜನಸೇವೆಗೆ ತೊಡಗಿಸಿಕೊಂಡು ನಂತರ ಭಾರತೀಯ ಜನತಾ ಪಕ್ಷದ ಸದಸ್ಯರಾಗಿ ವಿಧಾನಸಭೆಗೆ 6 ಬಾರಿ ಆಯ್ಕೆಯಾಗಿದ್ದಾರೆ. ಸ್ವಚ್ಛತೆಗೆ ಅತೀ ಮಹತ್ವ ನೀಡುವ ಇವರು ಇಲ್ಲಿನ ಜಾತ್ರೆ, ಹಬ್ಬಗಳ ನಂತರ ಆ ಜಾಗದಲ್ಲಿ ಬೀಳುವ ಕಸವನ್ನು ಸ್ವಚ್ಛಗೊಳಿಸಲು ಸ್ವತಃ ತಾವೇ ಬಂದುಬಿಡುತ್ತಾರೆ. ಜನಸೇವೆ ಮಾಡುವುದಾದರೆ ಏನನ್ನೂ ಬಯಸಬೇಡ ಮತ್ತು ತೆಗೆದುಕೊಳ್ಳಲೂ ಬೇಡ ಎನ್ನುವ ತಾಯಿಯ ಮಾತುಗಳೇ ತಮಗೆ ಆದರ್ಶ ಎನ್ನುತ್ತಾರೆ ಮಹೇಂದ್ರ ಮಶ್ರು. ಮದುವೆಯಾಗದೇ ಉಳಿದು ಸಂಪೂರ್ಣ ಜನಸೇವೆಗೆ ಬದ್ಧರಾಗಿರುವ ಇವರು ಈ ಬಾರಿಯ ಗುಜರಾತ್ ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷದಿಂದ 7ನೇ ಬಾರಿ ಆಯ್ಕೆ ಬಯಸಿ ಸ್ಪರ್ಧಿಸಿದ್ದಾರೆ.**



ಧಾರ್ಮಿಕ ವಿರೋಧಗಳ ನಡುವೆಯೂ ಪಾಕಿಸ್ಥಾನದಲ್ಲಿ ಯೋಗ ದಿನದಿಂದ ದಿನಕ್ಕೆ ಜನಪ್ರಿಯತೆ ಪಡೆದುಕೊಳ್ಳುತ್ತಿದೆ. ಕಳೆದ ಮೂರು ವರ್ಷಗಳಿಂದ ಪಾಕಿಸ್ಥಾನದಲ್ಲಿ ಅಂತಾರಾಷ್ಟ್ರೀಯ ಯೋಗ ದಿನವನ್ನು ನಡೆಸುತ್ತಾ ಬಂದಿದ್ದಾರೆ. ಪಾಕಿಸ್ಥಾನದಲ್ಲೂ ಯೋಗಕ್ಕೆ ಪ್ರಚಾರ ನೀಡಿ ಅಲ್ಲಿಯ ಜನರಿಗೆ ಅದರ ಲಾಭವನ್ನು ಪಡೆಯುವಂತೆ ಮಾಡುವುದು ತಮ್ಮ ಗುರಿ ಎನ್ನುತ್ತಾರೆ ಯೋಗಗುರು ಎಂದೇ ಪ್ರಸಿದ್ಧಿ ಪಡೆದಿರುವ ಯೋಗಿ ಹೈದರ್ ಬಾಬಾ ರಾಮ್‌ದೇವ್. ಇವರು ಪಾಕಿಸ್ತಾನದಲ್ಲಿ ಈಗಾಗಲೇ 20000 ಅಧಿಕ ಯೋಗಪಟುಗಳಿಗೆ ಮತ್ತು 100ಕ್ಕೂ ಹೆಚ್ಚು ಯೋಗ ಶಿಕ್ಷಕರಿಗೂ ತರಬೇತಿ ನೀಡಿದ್ದಾರೆ. ಪಂಜಾಬ್ ಪ್ರಾಂತ್ಯದಲ್ಲಿ 500ಕ್ಕೂ ಹೆಚ್ಚು ಯೋಗ ಕ್ಲಬ್‌ಗಳು ಪ್ರಾರಂಭವಾಗಿವೆ. ಕರಾಚಿಯಲ್ಲೂ ಬೆಳಗಿನ ಸಮಯದಲ್ಲಿ ಮೈದಾನಗಳಲ್ಲಿ ಸಾಮಾನ್ಯವಾಗಿ ಯೋಗಾಭ್ಯಾಸ ನಿರತ ಜನರನ್ನು ಕಾಣಬಹುದಾಗಿದೆ. ಜಗತ್ತಿನ ಎಲ್ಲಾ ದೇಶಗಳೂ ಭಾರತೀಯ ಮೂಲದ ಪುರಾತನ ಜ್ಞಾನ ಸಂಪತ್ತಾದ ಯೋಗವನ್ನು ಜಾತಿಮತಬೇಧವಿಲ್ಲದೇ ಅಪ್ಪಿಕೊಳ್ಳುತ್ತಿರುವುದು ಹೆಮ್ಮೆಯ ವಿಷಯ.






**ಹಿಂದೊಮ್ಮೆ ಶ್ರೀನಗರದಲ್ಲಿ ಭದ್ರತಾ ಪಡೆಗಳ ಮೇಲೆ ಕಲ್ಲು ತೂರಾಟಕ್ಕೆ ಯುವತಿಯರ ಗುಂಪೊಂದನ್ನು ಮುನ್ನಡೆಸಿ ತಾನೂ ಕಲ್ಲು ತೂರಿದ್ದ ಯುವತಿ ಅಫ್ಸಾನ್ ಆಶಿಕ್ ಈಗ ಜಮ್ಮು–ಕಾಶ್ಮೀರದ ಮಹಿಳಾ ಫುಟ್ಬಾಲ್ ತಂಡವನ್ನು ನಾಯಕಿಯಾಗಿ ಮುನ್ನಡೆಸಲಿದ್ದಾರೆ. ಇತ್ತೀಚೆಗೆ ತಮ್ಮ ತಂಡದೊಂದಿಗೆ ಕೇಂದ್ರ ಗೃಹಮಂತ್ರಿ ರಾಜನಾಥ್ ಸಿಂಗ್ ಭೇಟಿ ಮಾಡಿದ ಅಫ್ಸಾನ್ ಅವರು ತಮ್ಮ ಹಿಂದಿನ ದಿನಗಳನ್ನು ನೆನಸಿಕೊಳ್ಳುತ್ತಾ ಈಗ ಜಮ್ಮು ಮತ್ತು ಕಾಶ್ಮೀರದಲ್ಲಿ ಪರಿಸ್ಥಿತಿ ಬಹಳ ಸುಧಾರಿಸಿದೆ. ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳು ಅಭಿವೃದ್ಧಿಗೆ ಸಾಕಷ್ಟು ಕ್ರಮಗಳನ್ನು ತೆಗೆದುಕೊಂಡಿದ್ದು, ಯುವ ಜನರಿಗೆ ಉತ್ತಮ ಸೌಲಭ್ಯಗಳು ಹಾಗೂ ಸೌಕರ್ಯಗಳನ್ನು ನೀಡುತ್ತಿರುವುದನ್ನು ಹೊಗಳಿದ್ದಾರೆ. ಈಗ ತಮ್ಮ ಜೀವನ ಬದಲಾಗಿರುವುದನ್ನು ಕಂಡು ಸಂತೋಷಪಟ್ಟ ಆಶಿಕ್ ದೇಶಕ್ಕೆ ಮತ್ತು ರಾಜ್ಯಕ್ಕೆ ಹೆಮ್ಮೆ ತರುವ ಕೆಲಸವನ್ನು ಮಾಡುವುದೇ ತನ್ನ ಮುಂದಿನ ನನ್ನ ಗುರಿ ಎಂದಿದ್ದಾರೆ.**

ಆಯ್ಕೆಯಾದ ಜನಪ್ರತಿನಿಧಿಗಳ ಮೇಲಿರುವ ಅಪರಾಧ ಮೊಕದ್ದಮೆಗಳ ಶೀಘ್ರ ಇತ್ಯರ್ಥಕ್ಕಾಗಿ 12 ವಿಶೇಷ ನ್ಯಾಯಾಲಯ ಪೀಠ ರಚನೆಗೆ ಸಂಬಂಧಿಸಿದ ಸರ್ವೋಚ್ಚ ನ್ಯಾಯಾಲದ ನಿರ್ದೇಶನಕ್ಕೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ. ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳ ಅಪರಾಧ ಹಿನ್ನೆಲೆಯ ಚರ್ಚೆಯ ಸಂದರ್ಭದಲ್ಲಿ ಸರ್ವೋಚ್ಚ ನ್ಯಾಯಾಲಯ ಈ ಮನವಿಯನ್ನು ಕೇಂದ್ರ ಸರ್ಕಾರಕ್ಕೆ ನೀಡಿತ್ತು. 2014ರ ವೇಳೆಗೆ ಸುಮಾರು 1581 ಜನಪ್ರತಿನಿಧಿಗಳ (ವಿಧಾನಸಭಾ ಸದಸ್ಯರು ಹಾಗು ಸಂಸತ್ ಸದಸ್ಯರು) ವಿರುದ್ಧ ಸುಮಾರು 13,500ಕ್ಕೂ ಹೆಚ್ಚು ಅಪರಾಧ ಮೊಕದ್ದಮೆಗಳು ಇತ್ಯರ್ಥವಾಗದೇ ಬಾಕಿ ಉಳಿದಿದ್ದವು. ಈ ಕುರಿತು ಸರ್ವೋಚ್ಚ ನ್ಯಾಯಾಲಯ ಕಳವಳ ವ್ಯಕ್ತಪಡಿಸಿ, ವಿಶೇಷ ನ್ಯಾಯಾಲಯಗಳು ಮಾರ್ಚ್ 2018ರ ವೇಳೆಗೆ ರಚನೆಗೊಂಡು ಕಾರ್ಯನಿರ್ವಹಿಸಲು ಪ್ರಾರಂಭಿಸಬೇಕು ಎಂದು ನಿರ್ದೇಶನ ನೀಡಿತ್ತು. ಇದನ್ನು ಗಂಭೀರವಾಗಿ ಪರಿಗಣಿಸಿರುವ ಕೇಂದ್ರ ಸರ್ಕಾರ ನ್ಯಾಯಾಲಯಗಳ ತ್ವರಿತ ಸ್ಥಾಪನೆಗೆ ಮುಂದಾಗಿದೆ.

**ಜಗತ್ತಿನ ಹಲವು ದೇಶಗಳಲ್ಲಿ ನೆಲೆಸಿರುವ ಅತೀ ಹೆಚ್ಚು ವಲಸಿಗರ ಪಟ್ಟಿಯಲ್ಲಿ ಭಾರತೀಯರು ಮೊದಲ ಸ್ಥಾನ ಪಡೆದಿದ್ದಾರೆ. ಅಂದರೆ ಭಾರತದಿಂದ ಬೇರೆ ದೇಶಗಳಿಗೆ ತೆರಳುವ ವಲಸಿಗರ ಸಂಖ್ಯೆ ವಿಶ್ವದ ಉಳಿದೆಲ್ಲಾ ರಾಷ್ಟ್ರಗಳನ್ನೂ ಮೀರಿಸಿದೆ. ವಿಶ್ವದ ಒಟ್ಟು ವಲಸಿಗರ ಸಂಖ್ಯೆಯಲ್ಲಿ ಸುಮಾರು 5% ಜನಸಂಖ್ಯೆಯಷ್ಟು ಭಾರತೀಯರಿದ್ದಾರೆ. ಕಳೆದ ಹಲವು ವರ್ಷಗಳಲ್ಲಿನ ಭಾರತೀಯ ವಲಸಿಗರ ಸಂಖ್ಯೆ ಸುಮಾರು 1.5 ಕೋಟಿ. ಮತ್ತು 25 ವರ್ಷಗಳ ಹಿಂದೆ ಈ ಸಂಖ್ಯೆ ಕೇವಲ ಅರ್ಧದಷ್ಟಿತ್ತು. ಆದರೆ ವಿಶ್ವದ ಎಲ್ಲಾ ರಾಷ್ಟ್ರಗಳನ್ನು ತೆಗೆದುಕೊಂಡರೆ ವಲಸಿಗರ ಸರಾಸರಿ ಪ್ರಸ್ತುತ ಶೇಕಡಾ 4ರಷ್ಟಿದ್ದು ಇದಕ್ಕೆ ಹೋಲಿಸಿದಾಗ ಭಾರತದಲ್ಲಿ ಶೇ. 1% ಜನಸಂಖ್ಯೆ ಮಾತ್ರ ವಲಸಿಗರಾಗಿದ್ದಾರೆ. ಭಾರತದ ಸುಮಾರು ಅರ್ಧದಷ್ಟು ವಲಸಿಗರು ಅಮೆರಿಕಾ, ಸೌದಿ ರಾಷ್ಟ್ರಗಳಲ್ಲಿದ್ದಾರೆ. ಇನ್ನೊಂದೆಡೆ ಭಾರತ ಅತೀ ಹೆಚ್ಚು ವಲಸಿಗರು ವಾಸಿಸುವ ದೇಶಗಳ ಪಟ್ಟಿಯಲ್ಲಿ 12ನೇ ಸ್ಥಾನ ಪಡೆದುಕೊಂಡಿದೆ. ಭಾರತದಲ್ಲಿ ಅತೀ ಹೆಚ್ಚು ವಾಸಿಸುವ ವಲಸಿಗರ ಪೈಕಿ ಕ್ರಮವಾಗಿ ಬಾಂಗ್ಲಾದೇಶ, ಪಾಕಿಸ್ಥಾನ ಹಾಗೂ ಶ್ರೀಲಂಕಾ ದೇಶಗಳಿಂದ ಬಂದಿರುವರಾಗಿದ್ದಾರೆ.**

ಆನೇಕಲ್ಲಿನ ಜಿಗಣಿಯ ಕಲ್ಲು ಗಣಿಗಾರಿಕೆ ಮಾಲಿಕನೊಬ್ಬ 2 ಕುಟುಂಬಗಳ 11 ಸದಸ್ಯರನ್ನು ಜೀತದಾಳುಗಳಾಗಿ ತನ್ನ ಕಲ್ಲು ಕ್ವಾರಿ ಹಾಗೂ ಮರಳು ಗಣಿಗಾರಿಕೆಯಲ್ಲಿ ದುಡಿಸಿಕೊಳ್ಳುತ್ತಿದ್ದುದು ಬೆಳಕಿಗೆ ಬಂದಿದೆ. ಐಜೆಎಂ ಎಂಬ ಸರ್ಕಾರೇತರ ಸಂಸ್ಥೆಯ ಕಾರ್ಯಕರ್ತರು ಪೊಲೀಸರ ನೆರವಿನೊಂದಿಗೆ ಇವರನ್ನು ರಕ್ಷಿಸಿದ್ದಾರೆ. ತಮಿಳುನಾಡಿನ ಕೃಷ್ಣಗಿರಿಯಿಂದ ಬಂದಿರುವ ಒಂದು ಕುಟುಂಬ 24 ವರ್ಷಗಳಿಂದ ಹಾಗೂ ಇನ್ನೊಂದು ಕುಟುಂಬ 19 ವರ್ಷಗಳಿಂದ ಜೀತ ಮಾಡುತ್ತಿತ್ತು. ತಕ್ಷಣದ ಅನುಕೂಲಕ್ಕಾಗಿ ಜಿಲ್ಲಾಡಳಿತ ರಕ್ಷಿತ ಕುಟುಂಬಗಳಿಗೆ 20 ಸಾವಿರ ರೂಪಾಯಿ ಧನ ಸಹಾಯವನ್ನು ನೀಡಿ, ಅವರಿಗೆ ಪುನರ್ವಸತಿ ಕಲ್ಪಿಸುವ ಪ್ರಯತ್ನ ಮಾಡುತ್ತಿದೆ.

पुंगव PUNGAVA
# 74, Ranga Rao Road, Shankarapuram,
Bangalore - 560 004. Ph: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 26, December 2017

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10th and 25th of every Month REG.NO.CPMG/KA/BGS/102/2018-20

FORTNIGHTLY 1-1-2018



# ಜನವರಿ 12ರಿಂದ 26ರವರೆಗೆ ರಾಜ್ಯಾದ್ಯಂತ ವಿವೇಕ್ ಬ್ಯಾಂಡ್ ಅಭಿಯಾನ




ಜನವರಿ 12ರ ವಿವೇಕಾನಂದ ಜಯಂತಿ ಮತ್ತು ರಾಷ್ಟ್ರೀಯ ಯುವದಿನದ ಪ್ರಯುಕ್ತ ರಾಜ್ಯಾದ್ಯಂತ ವಿವೇಕ್ ಬ್ಯಾಂಡ್ ಅಭಿಯಾನ ನಡೆಯಲಿದೆ. 'ಉತ್ತಮನಾಗು – ಉಪಕಾರಿಯಾಗು' ಎಂಬ ಸಂದೇಶದೊಂದಿಗೆ ನಡೆಯುತ್ತಿರುವ ಈ ಅಭಿಯಾನದ ನೇತೃತ್ವವನ್ನು ಸಮರ್ಥ ಭಾರತ ಸಂಸ್ಥೆ ವಹಿಸಲಿದೆ. ರಾಜ್ಯದ ಅನೇಕ ಸ್ವಯಂಸೇವಾ ಸಂಸ್ಥೆಗಳು, ಯುವಜನರು, ಶಾಲಾ–ಕಾಲೇಜುಗಳು ಕಳೆದ 3 ವರ್ಷಗಳಿಂದ ಈ ಅಭಿಯಾನದಲ್ಲಿ ಪಾಲ್ಗೊಳ್ಳುತ್ತಿದ್ದು, ಈ ಬಾರಿಯೂ ಸುಮಾರು 10 ಲಕ್ಷಕ್ಕೂ ಹೆಚ್ಚು ಯುವಜನರನ್ನು ತಲುಪುವ ಗುರಿಯನ್ನು ಹೊಂದಲಾಗಿದೆ ಎಂದು ಸಮರ್ಥ ಭಾರತ ತಿಳಿಸಿದೆ.




ವರ್ಷದಿಂದ ವರ್ಷಕ್ಕೆ ಹೆಚ್ಚು ಹೆಚ್ಚು ಜನರು ವಿವೇಕ್ ಬ್ಯಾಂಡ್ ಧರಿಸಿ, ಯಾವುದಾದರೂ ಒಂದು ಒಳ್ಳೆಯ ಕೆಲಸ ಮಾಡುವ ಪರಿಪಾಟ ಬೆಳೆಸಿಕೊಳ್ಳುತ್ತಿದ್ದು, ಕಳೆದ ಬಾರಿ ವಿವೇಕ್ ಬ್ಯಾಂಡ್ ಧರಿಸಿ ಒಂದು ಲಕ್ಷಕ್ಕೂ ಹೆಚ್ಚು ಜನ ನೇತ್ರದಾನದ ಸಂಕಲ್ಪ ಮಾಡಿದ್ದರು. ಈ ಬಾರಿಯ ವಿವೇಕ್ ಬ್ಯಾಂಡ್ ಅಭಿಯಾನದ ಅಂಗವಾಗಿ ಮಾಡಬಹುದಾದ ಮೂರು ಸಮಾಜೋಪಯೋಗಿ ಕೆಲಸಗಳನ್ನು ಸಮರ್ಥ ಭಾರತ ಸಂಸ್ಥೆ ಜನರ ಮುಂದಿಟ್ಟಿದೆ.

1. ಪ್ರತಿಯೊಬ್ಬರೂ ಒಂದು ಗಿಡವನ್ನು ದತ್ತು ತೆಗೆದುಕೊಂಡು ಅದರ ಪಾಲನೆ, ರಕ್ಷಣೆಯ ಜವಾಬ್ದಾರಿಯನ್ನು ತೆಗೆದುಕೊಳ್ಳುವುದು.
2. ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡಿ, ಪರಿಸರಸ್ನೇಹಿ ವಸ್ತುಗಳನ್ನು ಬಳಸುವ ಅಭ್ಯಾಸ ಮಾಡುವುದು. ಉದಾ: ಪ್ಲಾಸ್ಟಿಕ್ ಚೀಲದ ಬದಲಿಗೆ ಬಟ್ಟೆ ಚೀಲ, ಪ್ಲಾಸ್ಟಿಕ್ ತಟ್ಟೆ–ಲೋಟದ ಬದಲಿಗೆ ಸ್ಟೀಲ್ ಅಥವಾ ಅಡಿಕೆಹಾಳೆಯ ತಟ್ಟೆ–ಲೋಟಗಳ ಬಳಕೆ.
3. ಖಾದಿ ಬಟ್ಟೆಯ ಬಳಕೆಯನ್ನು ಹೆಚ್ಚಿಸುವುದು.

**ತಾವು ದತ್ತು ತೆಗೆದುಕೊಂಡ ಗಿಡದೊಂದಿಗೆ ಅಥವಾ ಖಾದಿ ಬಟ್ಟೆ ಧರಿಸಿ ಸೆಲ್ಫೀ ತೆಗೆದುಕೊಂಡು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುವ ಮೂಲಕ ಜನವರಿ 12ರಿಂದ 26ರವರೆಗೆ ನಡೆಯುವ ಈ ಅಭಿಯಾನದಲ್ಲಿ ಪಾಲ್ಗೊಳ್ಳಲು ಹೆಚ್ಚು ಹೆಚ್ಚು ಜನರಿಗೆ ಪ್ರೇರಣೆ ನೀಡಬೇಕೆಂದು ಸಮರ್ಥ ಭಾರತ ಸಾರ್ವಜನಿಕರಲ್ಲಿ ವಿನಂತಿಸಿದೆ.**

## ರಾಮಸೇತು ನೈಸರ್ಗಿಕವಲ್ಲ, ಮಾನವ ನಿರ್ಮಿತ: ಅಮೆರಿಕ ವಿಜ್ಞಾನಿಗಳು

ವಿಜ್ಞಾನ ಮತ್ತು ತಂತ್ರಜ್ಞಾನದ ವಿಷಯಗಳ ಪ್ರಸಾರಕ್ಕೆ ಹೆಸರಾದ ಡಿಸ್ಕವರಿ ಟಿವಿ ವಾಹಿನಿಯ ಇತ್ತೀಚಿನ ವರದಿಯ ಪ್ರಕಾರ ಅಮೆರಿಕದ ವಿಜ್ಞಾನಿಗಳ ಸಂಶೋಧನೆಯು ರಾಮಸೇತು ನೈಸರ್ಗಿಕ ರಚನೆಯಲ್ಲ, ಮಾನವನಿರ್ಮಿತವೆಂದು ಹೇಳಿದೆ. ಡಿಸ್ಕವರಿ ಚಾನೆಲ್ 'ವಾಟ್ ಆನ್ ಅರ್ಥ್' ಕಾರ್ಯಕ್ರಮದ ಪ್ರಚಾರ ವೀಡಿಯೋ ತುಣುಕನ್ನು ಬಿಡುಗಡೆಗೊಳಿಸಿದ್ದು ಅದರಲ್ಲಿ ವಿಜ್ಞಾನಿಗಳು ಹಾಗೂ ಪುರಾತತ್ವಜ್ಞರ ಹೇಳಿಕೆಗಳನ್ನು ತೋರಿಸಲಾಗಿದೆ.

ಭೂವಿಜ್ಞಾನಿ ಡಾ. ಅಲನ್ ಲಸ್ಟರ್ ಸೇತುವೆಯಿರುವ ಜಾಗದ ಸುತ್ತಲಿನ ಮರಳುಪಟ್ಟಿ ಕೇವಲ 4,000 ವರ್ಷಗಳಷ್ಟು ಹಾಗೂ ಸೇತುವೆಗೆ ಬಳಸಿರುವ ಕಲ್ಲುಗಳು 7,000 ವರ್ಷಗಳಷ್ಟು ಹಳೆಯದಾಗಿದ್ದು, ಸೇತುವೆಯಲ್ಲಿರುವ ಬಂಡೆಗಳನ್ನು ಬೇರೆಡೆಯಿಂದ ತರಲಾಗಿದೆ; ಅವು ಅಲ್ಲೇ ಆಗಿರುವ ರಚನೆಗಳಲ್ಲ ಎಂದು ಹೇಳಿರುವುದನ್ನು ಈ ವೀಡಿಯೋ ತುಣುಕಿನಲ್ಲಿ ತೋರಿಸಲಾಗಿದೆ.

**ರಾಮಸೇತುವಿನ ಬಗ್ಗೆ ನಮಗೆ ತಿಳಿದಿರುವ ಕೆಲವು ಕುತೂಹಲಕರ ಮಾಹಿತಿಗಳು:**

- ರಾಮಸೇತುವೆ ತಮಿಳುನಾಡಿನ ಪಂಬನ್ ದ್ವೀಪವನ್ನು ಶ್ರೀಲಂಕಾದ ಮನ್ನಾರ್ ದ್ವೀಪಕ್ಕೆ ಸಂಪರ್ಕಿಸುವ ಸೇತುವೆ
- 15ನೇ ಶತಮಾನದವರೆಗೂ ಈ ಸೇತುವೆ ಸಮುದ್ರಕ್ಕಿಂತ ಮೇಲ್ಮಟ್ಟದಲ್ಲಿಯೇ ಇತ್ತು ಹಾಗೂ ಜನರು ನಡೆದುಕೊಂಡೇ ಶ್ರೀಲಂಕಾಕ್ಕೆ ಹೋಗುತ್ತಿದ್ದರು. ದೇವಸ್ಥಾನದ ದಾಖಲೆಗಳ ಪ್ರಕಾರ 1480ರಲ್ಲಿ ಚಂಡಮಾರುತದಿಂದ ಆದ ಹಾನಿಯಿಂದಾಗಿ ಕೆಲವು ಭಾಗ ಭಗ್ನಗೊಂಡಿತು.
- 50 ಕಿಲೋ ಮೀಟರ್ ಉದ್ದವಿರುವ ಈ ಸೇತುವೆ ಕೆಲ ಭಾಗಗಳಲ್ಲಿ ಸಮುದ್ರದ ನೀರಿನ ಮೇಲ್ಭಾಗದಿಂದ ಕೇವಲ 3 ಅಡಿಗಳಷ್ಟು ಮಾತ್ರ ಕೆಳಗಿದೆ.
- ಭಾರತ ಮತ್ತು ಶ್ರೀಲಂಕಾ ನಡುವೆ ಈ ಮೂಲಕ ಹಿಂದೆ ಭೂಸಂಪರ್ಕವಿತ್ತೆಂದು ಭೂವೈಜ್ಞಾನಿಕ ಪುರಾವೆಗಳೂ ಹೇಳುತ್ತವೆ.
- ವಾಲ್ಮೀಕಿ ರಾಮಾಯಣದಲ್ಲಿ ಹೇಳಿರುವ ಪ್ರಕಾರ ಇದು ರಾಮನ ವಾನರ ಸೇನೆ ನಿರ್ಮಿಸಿರುವ ಸೇತುವೆ.

## ಮುಸ್ಲಿಂ ಬಹುಸಂಖ್ಯಾತ ಗ್ರಾಮವೊಂದರ ಅದೃಷ್ಟ ಬದಲಿಸಿದ ಆರೆಸ್ಸೆಸ್



ಮುಸ್ಲಿಂ ಯುವಕರನ್ನು ದಾರಿ ತಪ್ಪಿಸಿ, ಐಸಿಸ್ ಸೇರುವಂತೆ ಮಾಡುತ್ತಿರುವವರ ಸುದ್ದಿಗಳೇ ಹೆಚ್ಚಾಗಿರುವ ಇಂದಿನ ದಿನಗಳಲ್ಲಿ, ಅಪರಾಧಗಳಲ್ಲಿ ತೊಡಗಿದ್ದ ಒಂದು ಗ್ರಾಮದ ಯುವಕರನ್ನು ಮುಖ್ಯವಾಹಿನಿಗೆ ಬರುವಂತೆ ಮಾಡಿ, ಆ ಗ್ರಾಮದ ಅದೃಷ್ಟವನ್ನೇ ಬದಲಿಸಿದ ಆರೆಸ್ಸೆಸ್‌ನ ಕಾರ್ಯ ನಿಜಕ್ಕೂ ಪ್ರೇರಣಾದಾಯಿ.

ಮುಸ್ಲಿಮರೇ ಹೆಚ್ಚಾಗಿರುವ ಜಾರ್ಖಂಡ್‌ನ ರಾಂಚಿಯಿಂದ ರಾಜ್ಯದ ಹಫುವಾ ಗ್ರಾಮ 20 ವರ್ಷಗಳ ಹಿಂದೆ ಡಕಾಯಿತರು, ಸರಗಳ್ಳರನ್ನು ತಯಾರು ಮಾಡುವ ಗ್ರಾಮ ಎಂಬ ಕುಖ್ಯಾತಿಯನ್ನು ಪಡೆದಿತ್ತು. ಮಕ್ಕಳು ಶಾಲೆಗೆ ಹೋಗುತ್ತಿರಲಿಲ್ಲ, ವಯಸ್ಕರು ತಮ್ಮದೇ ಹೊಲಗಳಿದ್ದರೂ ಅದರಲ್ಲಿ ದುಡಿಯುತ್ತಿರಲಿಲ್ಲ. ಸುಮಾರು 1,000 ದಷ್ಟು ಜನಸಂಖ್ಯೆಯಿರುವ ಈ ಗ್ರಾಮದ ಚಿತ್ರಣವೀಗ ಸಂಪೂರ್ಣ ಬದಲಾಗಿದೆ. ಅದಕ್ಕೆ ಕಾರಣ ರಾಷ್ಟ್ರೀಯ ಸ್ವಯಂಸೇವಕ ಸಂಘದ ಗ್ರಾಮೋತ್ಥಾನ ಯೋಜನೆ.

ಬಿಹಾರದ ಆರ್‌ಎಸ್‌ಎಸ್ ಕ್ಷೇತ್ರೀಯ ಸಂಘಚಾಲಕರು ಹಾಗೂ ರಾಷ್ಟ್ರೀಯ ಸೇವಾಭಾರತಿಯ ಅಧ್ಯಕ್ಷರೂ ಆದ ಸಿದ್ಧಿನಾಥ್ ಸಿಂಗ್‌ರವರು ಸ್ವತಃ ಆಸ್ಥೆ ವಹಿಸಿ, ಸಂಘದ ಕಾರ್ಯಕರ್ತರೊಂದಿಗೆ ಈ ಗ್ರಾಮದ ಚಿತ್ರಣವನ್ನು ಬದಲಾಯಿಸಲು ಪ್ರಯತ್ನಿಸಿದ್ದರ ಫಲವಾಗಿ ಕಳೆದ ಹತ್ತು ವರ್ಷಗಳಿಂದ ಈ ಗ್ರಾಮದ ಯಾವ ವ್ಯಕ್ತಿಯೂ ಕಳ್ಳತನ, ದರೋಡೆಯಂತಹ ಕೃತ್ಯಗಳಲ್ಲಿ ತೊಡಗಿಲ್ಲ. ಗ್ರಾಮದ ಯುವಕರಿಗೆ ಉತ್ತಮ ಸಂಸ್ಕಾರ ಮತ್ತು ಉದ್ಯೋಗ ತರಬೇತಿಯೊಂದಿಗೆ ಪ್ರಾರಂಭವಾದ ಕೆಲಸದಿಂದ ಇಂದು ಅಲ್ಲಿ ಸೇವಾಭಾರತಿಗೆ ಜನಮನ್ನಣೆ ತಂದಿದೆ. ಒಟ್ಟು 150ಕ್ಕೂ ಹೆಚ್ಚು ಯುವಕರು ಸಿದ್ಧಿನಾಥ್ ಸಿಂಗ್‌ರವರ ಸಂಸ್ಥೆಯಲ್ಲಿ ಕೌಶಲ್ಯ ತರಬೇತಿ ಪಡೆದು ದೇಶದ ಹಲವೆಡೆ ಹಾಗೂ ಕೊಲ್ಲಿ ರಾಷ್ಟ್ರಗಳಲ್ಲಿ ವಿವಿಧ ಕಂಪನಿಗಳಲ್ಲಿ ಉದ್ಯೋಗ ಪಡೆದಿದ್ದಾರೆ.

ಇಲ್ಲಿನ ಸರಸ್ವತಿ ವಿದ್ಯಾಮಂದಿರದಲ್ಲಿ ಹತ್ತನೇ ತರಗತಿಯಲ್ಲಿ ಓದುತ್ತಿರುವ ಜನಿಸರ್ ಅನ್ಸಾರಿ ಹೇಳುತ್ತಾನೆ – "ನನ್ನ ಎಲ್ಲ ಖರ್ಚನ್ನು ಸೇವಾಭಾರತಿಯೇ ಭರಿಸುತ್ತಿದೆ. ಐಐಟಿಯಲ್ಲಿ ಇಂಜಿನಿಯರಿಂಗ್ ಮಾಡಿ, ನಮ್ಮ ಗ್ರಾಮದ ಮೊದಲ ಇಂಜಿನಿಯರ್ ಆಗಬೇಕೆನ್ನುವುದು ನನ್ನ ಗುರಿ."

## ಫ್ರಾನ್ಸ್‌ನಲ್ಲಿ ಅನಧಿಕೃತ ಮಸೀದಿಗಳಿಗೆ ಬೀಗ

ಕಳೆದ ತಿಂಗಳು ಸುಮಾರು 130 ಜನರನ್ನು ಬಲಿ ತೆಗೆದುಕೊಂಡ ಉಗ್ರರ ದಾಳಿಯ ನಂತರ ಎಚ್ಚೆತ್ತಿರುವ ಫ್ರಾನ್ಸ್ ಸರ್ಕಾರ ಅಲ್ಲಿನ ಎಲ್ಲಾ ಅನಧಿಕೃತ ಮಸೀದಿಗಳಿಗೆ ಬೀಗ ಹಾಕಲು ನಿರ್ಧರಿಸಿದೆ. ಅಧಿಕೃತ ಅಂಕಿ ಅಂಶಗಳ ಪ್ರಕಾರ ಪರವಾನಗಿ ಪಡೆಯದೇ ಕಾರ್ಯ ನಿರ್ವಹಿಸುತ್ತಿರುವ ಸುಮಾರು 100 ರಿಂದ 160 ಮಸೀದಿಗಳು ಫ್ರಾನ್ಸ್‌ನಲ್ಲಿದ್ದು ಇಂತಹ ಮಸೀದಿಗಳಲ್ಲಿ ದ್ವೇಷ ಬೋಧನೆ ನಡೆಯುತ್ತಿದೆ ಎಂಬ ಮಾಹಿತಿಯು ಸರ್ಕಾರಕ್ಕೆ ದೊರೆತಿದೆ. ಈಗಾಗಲೇ 3 ಮಸೀದಿಗಳನ್ನು ಮುಚ್ಚಿಸಿರುವ ಸರ್ಕಾರ ಹಲವಾರು ಪ್ರಗತಿಪರ ಮುಸ್ಲಿಂ ದೇಶಗಳಲ್ಲೇ ಇಂತಹ ಬೋಧನೆಗಳಿಗೆ ಅವಕಾಶ ನೀಡದಿರುವಾಗ ಫ್ರಾನ್ಸ್‌ನಲ್ಲಿ ಈ ರೀತಿಯ ವಿಚಾರಗಳಿಗೆ ನೀಡುವುದು ಅಸಾಧ್ಯ ಎಂದು ಹೇಳಿದೆ.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ: ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–19.